# ಕರ್ನಾಟಕ ದಾದಿಯರು, ಸೂಲಗಿತ್ತಿಯರು ಮತ್ತು ಆರೋಗ್ಯ ಸಂದರ್ಶಕರ ಅಧಿನಿಯಮ, 1961

(ಕರ್ನಾಟಕ ರಾಜ್ಯಪತ್ರ, ಗುರುವಾರ ಫೆಬ್ರವರಿ 22, 2007ರ ಭಾಗ– IVಎ, 162 ರಿಂದ 176ರ ವರೆಗಿನ ಪುಟಗಳಲ್ಲಿ ಪ್ರಕಟಿತವಾಗಿದೆ)

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು**

**ಭಾಗ–I**

**ಪ್ರಾರಂಭಿಕ**

1. ಚಿಕ್ಕ ಹೆಸರು, ವ್ಯಾಪ್ತಿ, ಪ್ರಾರಂಭ ಮತ್ತು ಅನ್ವಯ
2. ಪರಿಭಾಷೆಗಳು

**ಭಾಗ–II**

**ಕರ್ನಾಟಕ ಶುಶ್ರೂಷಾ ಪರಿಷತ್ತು**

3. ಪರಿಷತ್ತಿನ ಸ್ಥಾಪನೆ, ನಿಗಮನ ಮತ್ತು ರಚನೆ
4. ಚುನಾವಣೆ ನಡೆಯದ ಸಂದರ್ಭದಲ್ಲಿ ಸದಸ್ಯರ ನೇಮಕ
5. ಸದಸ್ಯರ ಪದಾವಧಿ
6. ಖಾಲಿ ಸ್ಥಾನ
7. ಖಾಲಿ ಸ್ಥಾನವು ವ್ಯವಹರಣೆಗಳ ಮೇಲೆ ಪರಿಣಾಮ ಬೀರದಿರುವುದು
8. ಅನರ್ಹತೆಗಳು
9. ಸದಸ್ಯನಾಗಿ ಮುಂದುವರಿಯಲು ಅಸಮರ್ಥತೆ
10. ಸದಸ್ಯರಿಗೆ ಗೈರು ಹಾಜರಾಗಲು ಅನುಮತಿ
11. ಮತದಾನದ ಹಂಚಿಕೆ ಪದ್ಧತಿಯ ಮೂಲಕ ಚುನಾವಣೆಗಳನ್ನು ನಡೆಸುವುದು

**ಭಾಗ–III**

**ನೋಂದಣಿ**

12. ನೋಂದಣಿ ಪುಸ್ತಕದ ನಿರ್ವಹಣೆ
13. ನೋಂದಣಿಗೆ ಹಕ್ಕುಳ್ಳ ವ್ಯಕ್ತಿಗಳು
14. ನೋಂದಣಿಯನ್ನು ನಿರಾಕರಿಸುವುದು ಮತ್ತು ಹೆಸರುಗಳನ್ನು ತೆಗೆದುಹಾಕುವುದು ಮತ್ತು ಪುನಃ ನಮೂದಿಸುವುದು
15. 14ನೇ ಪ್ರಕರಣದ ಅಡಿಯಲ್ಲಿನ ಆದೇಶದ ವಿರುದ್ಧ ಅಪೀಲು
16. ನವೀಕರಣ ಫೀಜು
17. ದಾದಿಯರು, ಸೂಲಗಿತ್ತಿಯರು, ಸಹಾಯಕ ದಾದಿ–ಸೂಲಗಿತ್ತಿಯರು ಮತ್ತು ಆರೋಗ್ಯ ಸಂದರ್ಶಕರಾಗಿ ವೃತ್ತಿಯನ್ನು ನಡೆಸುವ ವ್ಯಕ್ತಿಗಳ ಪಟ್ಟಿಯ ನಿರ್ವಹಣೆ

**ಭಾಗ–IV**

**ದಾದಿಯರು, ಸೂಲಗಿತ್ತಿಯರು, ಸಹಾಯಕ ದಾದಿ – ಸೂಲಗಿತ್ತಿಯರು ಮತ್ತು ಆರೋಗ್ಯ ಸಂದರ್ಶಕರು, ವೃತ್ತಿ ನಡೆಸುವುದಕ್ಕೆ ಹಕ್ಕುಳ್ಳವರಾಗಿರುವುದು ಮತ್ತು ಲೈಸೆನ್ಸ್ ಕೊಡುವ ಪ್ರಾಧಿಕಾರಿಗಳ ನಿಯಂತ್ರಣ**

18. ನೋಂದಾಯಿತರಾಗಿಲ್ಲದ ಅಥವಾ ಪಟ್ಟಿಯಲ್ಲಿ ಸೇರಿಸಿಲ್ಲದ ವ್ಯಕ್ತಿಗಳು ದಾದಿ, ಮುಂತಾದವರುಗಳಾಗಿ ವೃತ್ತಿಯನ್ನು ನಡೆಸದಿರುವುದು
19. ಕೆಲವು ಪ್ರದೇಶಗಳಲ್ಲಿ ವೃತ್ತಿ ನಡೆಸಲು ಷರತ್ತುಗಳು
20. ಲೈಸೆನ್ಸ್ ನೀಡಿಕೆ ಪ್ರಾಧಿಕಾರವು ಸಾಮಾನ್ಯ ಮೇಲ್ವಿಚಾರಣೆ ನಡೆಸುವುದು
21. ವೃತ್ತಿಯನ್ನು ಪ್ರಾರಂಭಿಸುವುದಕ್ಕೆ ಮುಂಚೆ ಲೈಸೆನ್ಸ್ ನೀಡಿಕೆ ಪ್ರಾಧಿಕಾರಕ್ಕೆ ನೋಟೀಸ್ ಕೊಡುವುದು

## ಭಾಗ–V
## ದಾದಿಯರ ಕಾರ್ಯ ಸಂಸ್ಥೆಗಳು

22. ದಾದಿಯರ ಕಾರ್ಯ ಸಂಸ್ಥೆಗಳ ವಿನಿಯಮ

## ಭಾಗ–VI
## ತರಬೇತಿ ಸಂಸ್ಥೆಗಳು

23. ತರಬೇತಿ ಸಂಸ್ಥೆಗಳು
24. ಸಂಸ್ಥೆಗಳಿಗೆ ಮನ್ನಣೆ ನೀಡಲು ನಿರಾಕರಿಸುವುದರ ವಿರುದ್ಧ ಅಪೀಲು

## ಭಾಗ–VII
## ಸಂಕೀರ್ಣ

25. ಮರಣದ ಬಗ್ಗೆ ನೋಟೀಸನ್ನು ಕೊಟ್ಟ ಮೇಲೆ ನೋಂದಣಿ ಪುಸ್ತಕದಿಂದ ಹೆಸರುಗಳನ್ನು ತೆಗೆದುಹಾಕುವುದು
26. ಪ್ರಮಾಣ ಪತ್ರವನ್ನು ಅಪ್ರಾಮಾಣಿಕವಾಗಿ ಬಳಸಿದ್ದಕ್ಕಾಗಿ ದಂಡ
27. ನೋಂದಾಯಿತ ದಾದಿ, ಸೂಲಗಿತ್ತಿ, ಸಹಾಯಕ ದಾದಿ ಸೂಲಗಿತ್ತಿ ಅಥವಾ ಆರೋಗ್ಯ ಸಂದರ್ಶಕರ ಪದವಿಯನ್ನು ಕಾನೂನುಬಾಹಿರವಾಗಿ ಹೊಂದಿರುವುದಕ್ಕಾಗಿ ದಂಡ
28. ಈ ಅಧಿನಿಯಮದ ಅಡಿಯಲ್ಲಿನ ಅಪರಾಧಗಳ ಅಧಿವಿಚಾರಣೆಗಾಗಿ ಸಕ್ಷಮವಾಗಿರುವ ನ್ಯಾಯಾಲಯ
29. ರಾಜ್ಯ ಸರ್ಕಾರದ ನಿಯಮ ರಚನಾಧಿಕಾರ
30. ಉಪ ವಿಧಿಗಳನ್ನು ರಚಿಸಲು ಪರಿಷತ್ತಿನ ಅಧಿಕಾರ
31. ಅಧಿನಿಯಮ, ನಿಯಮಗಳು ಅಥವಾ ಉಪ ವಿಧಿಗಳ ಅಡಿಯಲ್ಲಿ ಸದ್ಭಾವನೆಯಿಂದ ಕಾರ್ಯನಿರ್ವಹಿಸುವ ವ್ಯಕ್ತಿಗಳಿಗೆ ರಕ್ಷಣೆ
32. ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿ
33. ನಿಯಂತ್ರಣ
34. ನಿರಸನ
35. ತೊಂದರೆಗಳ ನಿವಾರಣೆಗೆ ಅಧಿಕಾರ

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

### I

**1962ರ ಅಧಿನಿಯಮ ಸಂಖ್ಯೆ 4.–** ಪ್ರಸ್ತುತ ದಾದಿಯರು, ಸೂಲಗಿತ್ತಿಯರು, ಮುಂತಾದವರ ನೋಂದಣಿಗಾಗಿ ರಾಜ್ಯದ ಮುಂಬಯಿ ಪ್ರದೇಶ, ಹೈದರಾಬಾದ್ ಪ್ರದೇಶ ಮತ್ತು ಮದರಾಸು ಪ್ರದೇಶದಲ್ಲಿ ಪ್ರತ್ಯೇಕ ಅಧಿನಿಯಮಗಳು ಜಾರಿಯಲ್ಲಿವೆ. ಕಾನೂನಿನಲ್ಲಿ ಏಕರೂಪತೆಯನ್ನು ತರುವ ದೃಷ್ಟಿಯಿಂದ ಮತ್ತು ಶುಶ್ರೂಷಾ ವೃತ್ತಿಯ ಮೇಲೆ ನಿಯಂತ್ರಣ ಸಾಧಿಸುವ ದೃಷ್ಟಿಯಿಂದ ಇಡೀ ಮೈಸೂರು ರಾಜ್ಯಕ್ಕೆ ಅನ್ವಯವಾಗುವ ಒಂದು ಏಕರೂಪದ ಕಾನೂನನ್ನು ಹೊಂದುವುದು ಅವಶ್ಯಕವಾಗಿದೆ. ಹಲವು ರಾಜ್ಯಗಳಲ್ಲಿ ಜಾರಿಯಲ್ಲಿರುವ ಅಧಿನಿಯಮಗಳನ್ನು ಜಾಗರೂಕತೆಯಿಂದ ಪರಿಶೀಲಿಸಿದ ಮೇಲೆ, ವಿಶ್ವ ಆರೋಗ್ಯ ಸಂಸ್ಥೆಯ ಶುಶ್ರೂಷಾ ಸಲಹೆಗಾರರೊಂದಿಗೆ ಮತ್ತು ಮೈಸೂರು ರಾಜ್ಯದ ವಿಶ್ವ ಆರೋಗ್ಯ ಸಂಸ್ಥೆಯ ಸಲಹೆಗಾರರು, ಎಂ.ಸಿ.ಎಚ್ ಯೋಜನೆ, ಇವರೊಂದಿಗೆ ಸಮಾಲೋಚಿಸಿದ ತರುವಾಯ ಈ ವಿಧೇಯಕವನ್ನು ಸಿದ್ಧಪಡಿಸಲಾಗಿದೆ.

(ಕಡತ ಸಂಖ್ಯೆ ಎಲ್‌ಎಡಬ್ಲ್ಯೂ 13 ಎಲ್‌ಜಿಎನ್ 60 ಇದರಿಂದ ತೆಗೆದುಕೊಳ್ಳಲಾಗಿದೆ.)

### II

**1980ರ ತಿದ್ದುಪಡಿ ಮಾಡುವ ಅಧಿನಿಯಮ 27.–** ಕರ್ನಾಟಕ ಶುಶ್ರೂಷಾ ಪರಿಷತ್ತು, ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತರಾಗಿರುವ ದಾದಿಯರು, ಸೂಲಗಿತ್ತಿಯರು, ಸಹಾಯಕ ದಾದಿಯರು ಮತ್ತು ಆರೋಗ್ಯ ಸಂದರ್ಶಕರ ಒಂದು ರಿಜಿಸ್ಟರನ್ನು ನಿರ್ವಹಿಸುತ್ತದೆ. ರಿಜಿಸ್ಟರಿನಲ್ಲಿ ಅವರ ಹೆಸರುಗಳನ್ನು ಮುಂದುವರಿಸುವ ಉದ್ದೇಶಕ್ಕಾಗಿ, ನವೀಕರಣ ಶುಲ್ಕವನ್ನು ಸಂದಾಯ ಮಾಡುವ ಮೂಲಕ ಪ್ರತಿ ಮೂರು ವರ್ಷಕ್ಕೊಮ್ಮೆ ತಮ್ಮ ನೋಂದಣಿಯನ್ನು ನವೀಕರಿಸುವಂತೆ ಪರಿಷತ್ತು ಅಂಥ ದಾದಿಯರು ಮುಂತಾದವರನ್ನು ಅಗತ್ಯಪಡಿಸಬಹುದು. ಈಗ 1961ನೇ ಸಾಲಿನಲ್ಲಿ ನಿಗದಿಪಡಿಸಿದಂಥ ಒಂದು ರೂಪಾಯಿ ನವೀಕರಣ ಶುಲ್ಕವಿದೆ. ದಾದಿಯರು ಮುಂತಾದವರ ನೋಂದಣಿಗೆ ಸಂಬಂಧಿಸಿದ ವೆಚ್ಚದಲ್ಲಿ ಆಗಿರುವ ಹೆಚ್ಚಳವನ್ನು ಗಮನದಲ್ಲಿಟ್ಟುಕೊಂಡು ಅದನ್ನು ಐದು ರೂಪಾಯಿಗಳಿಗೆ ಹೆಚ್ಚಿಸಲು ಪ್ರಸ್ತಾವಿಸಲಾಗಿದೆ.

ಆದುದರಿಂದ ಈ ವಿಧೇಯಕ.

(ದಿನಾಂಕ 3ನೇ ಫೆಬ್ರವರಿ 1981ರ ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ), ಭಾಗ –IV 2ಎ ಯಲ್ಲಿ, ಸಂಖ್ಯೆ 101 ಆಗಿ, ಪುಟ 3 ರಲ್ಲಿ ಪ್ರಕಟಿಸಲಾಗಿದೆ.)

*****

# 1962ರ [1][ಕರ್ನಾಟಕ][1] ಅಧಿನಿಯಮ ಸಂಖ್ಯೆ 4

*(1962ರ ಜನವರಿ ಇಪ್ಪತ್ತೈದರಂದು [1][ಕರ್ನಾಟಕ ರಾಜ್ಯಪತ್ರ][1] ದಲ್ಲಿ ಮೊದಲು ಪ್ರಕಟವಾಗಿದೆ.)*

## [1][ಕರ್ನಾಟಕ][1] ದಾದಿಯರು, ಸೂಲಗಿತ್ತಿಯರು ಮತ್ತು ಆರೋಗ್ಯ ಸಂದರ್ಶಕರ ಅಧಿನಿಯಮ, 1961

*(1962 ರ ಜನವರಿ ಹದಿನಾರನೇ ದಿನದಂದು ರಾಷ್ಟ್ರಪತಿಯವರ ಅನುಮೋದನೆಯನ್ನು ಪಡೆದಿದೆ.)*

*(1981 ರ ಕರ್ನಾಟಕ ಅಧಿನಿಯಮ 27 ರ ಮೂಲಕ ತಿದ್ದುಪಡಿಯಾಗಿದೆ)*

[1][ಕರ್ನಾಟಕ ರಾಜ್ಯ][1] ದಲ್ಲಿ ದಾದಿಯರು, ಸೂಲಗಿತ್ತಿಯರು ಮತ್ತು ಆರೋಗ್ಯ ಸಂದರ್ಶಕರ ನೋಂದಣಿಗಾಗಿ ಉಪಬಂಧ ಕಲ್ಪಿಸುವ ಒಂದು ಅಧಿನಿಯಮ.

**1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.**

[1][ಕರ್ನಾಟಕ ರಾಜ್ಯ][1] ದಲ್ಲಿ ದಾದಿಯರು, ಸೂಲಗಿತ್ತಿಯರು ಮತ್ತು ಆರೋಗ್ಯ ಸಂದರ್ಶಕರ ನೋಂದಣಿಗಾಗಿ ಉಪಬಂಧ ಕಲ್ಪಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಹನ್ನೆರಡನೇ ವರ್ಷದಲ್ಲಿ [1][ಕರ್ನಾಟಕ ರಾಜ್ಯ][1] ವಿಧಾನ ಮಂಡಲದಿಂದ ಇದು ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

**1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.**

## ಭಾಗ– I

### ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ, ಪ್ರಾರಂಭ ಮತ್ತು ಅನ್ವಯ.–** (1) ಈ ಅಧಿನಿಯಮವನ್ನು [1][ಕರ್ನಾಟಕ][1] ದಾದಿಯರು, ಸೂಲಗಿತ್ತಿಯರು ಮತ್ತು ಆರೋಗ್ಯ ಸಂದರ್ಶಕರ ಅಧಿನಿಯಮ, 1961 ಎಂದು ಕರೆಯತಕ್ಕದ್ದು.

(2) ಇದು ಇಡೀ [1][ಕರ್ನಾಟಕ ರಾಜ್ಯಕ್ಕೆ][1] ವ್ಯಾಪ್ತವಾಗತಕ್ಕದ್ದು.

**1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.**

(3) (ಎ) (i) ಈ ಅಧಿನಿಯಮದ ಭಾಗ–I ಮತ್ತು ಭಾಗ–VIIರ 29ನೇ ಪ್ರಕರಣವು [1][ಕರ್ನಾಟಕ ರಾಜ್ಯ][1] ದಾದ್ಯಂತ ಈ ಕೂಡಲೇ ಜಾರಿಗೆ ಬರತಕ್ಕದ್ದು.

**1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.**

(ii) ಈ ಅಧಿನಿಯಮದ II, III, V, ಮತ್ತು VI ಈ ಭಾಗಗಳು, ಮತ್ತು VIIನೇ ಭಾಗದ ಉಳಿದ ಪ್ರಕರಣಗಳು, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ [1][ದಿನಾಂಕ][1] ದಂದು [2][ಕರ್ನಾಟಕ ರಾಜ್ಯ][2] ದಾದ್ಯಂತ ಜಾರಿಗೆ ಬರತಕ್ಕದ್ದು.

(ಬಿ) IVನೇ ಭಾಗವು, ರಾಜ್ಯಸರ್ಕಾರವು ಅಧಿಸೂಚನೆ ಹೊರಡಿಸಿ ನಿರ್ದಿಷ್ಟಪಡಿಸಬಹುದಾದಂಥ [1][ದಿನಾಂಕ][1] ದಂದು ಜಾರಿಗೆ ಬರತಕ್ಕದ್ದು ಮತ್ತು ಅಂಥ ಪ್ರದೇಶಗಳಲ್ಲಿ ಅಂಥ ವ್ಯಕ್ತಿಗಳ ವರ್ಗಕ್ಕೆ ಮಾತ್ರ ಅನ್ವಯವಾಗತಕ್ಕದು.

**1. ಈ ಅಧಿನಿಯಮದ 1(3) (ಎ) (ii) ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಭಾಗಗಳು ಅಧಿಸೂಚನೆಯ ಮೂಲಕ 16.8.1968ರಿಂದ ಜಾರಿಗೆ ಬಂದಿವೆ. ಅಧಿಸೂಚನೆಯ ಪಾಠವು ಕೊನೆಯ ಪುಟದಲ್ಲಿದೆ. iv ನೇ ಭಾಗವನ್ನು ಇನ್ನೂ ಜಾರಿಗೆ ತಂದಿರುವುದಿಲ್ಲ.**

**2. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.**

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಸಂಯೋಜಿತ ಸಂಸ್ಥೆ" ಎಂದರೆ ರೋಗಿಗಳ ಶುಶ್ರೂಷೆ, ಹೆರಿಗೆ ಅಥವಾ ಶಿಶು ಕಲ್ಯಾಣ ಇವುಗಳಿಗಾಗಿ ಇರುವ ಮತ್ತು ಉಪವಿಧಿಗಳಿಗೆ ಅನುಸಾರವಾಗಿ ಪರಿಷತ್ತಿಗೆ ಸಂಯೋಜನೆಗೊಳಿಸಬಹುದಾದ ಒಂದು ಸಂಸ್ಥೆ ;

(ಬಿ) "ಸಹಾಯಕ ದಾದಿ–ಸೂಲಗಿತ್ತಿ" ಎಂದರೆ ಈ ಸಂಬಂಧದಲ್ಲಿ ನಿಯಮಿಸಲಾಗುವ ಪರೀಕ್ಷೆಯಲ್ಲಿ ಉತ್ತೀರ್ಣಗೊಂಡಿರುವ ಒಬ್ಬ ವ್ಯಕ್ತಿ;

(ಸಿ) "ಉಪ ವಿಧಿ" ಎಂದರೆ 30 ನೇ ಪ್ರಕರಣದ ಅಡಿಯಲ್ಲಿ ಪರಿಷತ್ತು ರಚಿಸಿದ ಒಂದು ಉಪವಿಧಿ;

(ಡಿ) "ಪರಿಷತ್ತು" ಎಂದರೆ 3ನೇ ಪ್ರಕರಣದ ಅಡಿಯಲ್ಲಿ ರಚಿಸಿದ [1][ಕರ್ನಾಟಕ ಶುಶ್ರೂಷಾ ಪರಿಷತ್ತು;][1]

**1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.**

(ಇ) "ಆರೋಗ್ಯ ಸಂದರ್ಶಕ" ಎಂದರೆ ಈ ಸಂಬಂಧದಲ್ಲಿ ಪರಿಷತ್ತಿನಿಂದ ಮನ್ನಣೆ ಪಡೆದ ಯಾವುದೇ ಆರೋಗ್ಯ ಶಾಲೆ, ಸಂಸ್ಥೆ ಮತ್ತು ಪರೀಕ್ಷಾ ಮಂಡಲಿಯಿಂದ ಆರೋಗ್ಯ ಸಂದರ್ಶಕರ ಪ್ರಮಾಣ ಪತ್ರವನ್ನು ಪಡೆದಿರುವ ಒಬ್ಬ ವ್ಯಕ್ತಿ;

(ಎಫ್) "ಸಂಸ್ಥೆ" ಎಂಬ ಪದವು ದಾದಿಯರ ಸಂಸ್ಥೆಯನ್ನು ನಿರ್ವಹಿಸುವ ಅಥವಾ ನಿಯಂತ್ರಿಸುವ ಯಾವುದೇ ಸಂಘವನ್ನು ಒಳಗೊಳ್ಳುತ್ತದೆ;

(ಜಿ) "ಲೈಸೆನ್ಸ್ ನೀಡಿಕೆ ಪ್ರಾಧಿಕಾರ" ಎಂದರೆ ಪುರಸಭಾ ಪ್ರದೇಶದ ಸಂದರ್ಭದಲ್ಲಿ, ಪುರಸಭಾ ಕಾರ್ಪೊರೇಷನ್ ಅಥವಾ ಪುರಸಭಾ ಪರಿಷತ್ತು ಅಥವಾ ಅಂಥ ಪ್ರದೇಶಕ್ಕಾಗಿ ಸ್ಥಾಪಿಸಿದ ಇತರ ಪುರಸಭಾ ಪ್ರಾಧಿಕಾರ ಮತ್ತು ಯಾವುದೇ ಇತರ ಪ್ರದೇಶದ ಸಂದರ್ಭದಲ್ಲಿ, ಅಂಥ ಪ್ರದೇಶಕ್ಕಾಗಿ ಸ್ಥಾಪಿಸಿದ ತಾಲ್ಲೂಕು ಅಭಿವೃದ್ಧಿ ಮಂಡಲಿ:

ಪರಂತು, ಯಾವುದೇ ಪ್ರದೇಶದ ಸಂಬಂಧದಲ್ಲಿ, ರಾಜ್ಯ ಸರ್ಕಾರವು, ಅಧಿಸೂಚನೆ ಹೊರಡಿಸಿ ಅಂಥ ಪ್ರದೇಶದ ಲೈಸೆನ್ಸು ನೀಡಿಕೆ ಪ್ರಾಧಿಕಾರವಾಗಿ ಯಾವುದೇ ಇತರ ಪ್ರಾಧಿಕಾರವನ್ನು ನಿರ್ದಿಷ್ಟಪಡಿಸಬಹುದು;

(ಎಚ್) "ಪಟ್ಟಿ" ಎಂದರೆ 17ನೇ ಪ್ರಕರಣದ ಅಡಿಯಲ್ಲಿ ತಯಾರಿಸಿ ಇಟ್ಟಿರುವ ದಾದಿಯರ, ಸೂಲಗಿತ್ತಿಯರ, ಸಹಾಯಕ ದಾದಿ-ಸೂಲಗಿತ್ತಿಯರ ಮತ್ತು ಆರೋಗ್ಯ ಸಂದರ್ಶಕರ ಒಂದು ಪಟ್ಟಿ;

(ಐ) "ಸೂಲಗಿತ್ತಿ" ಎಂದರೆ ಪರಿಷತ್ತು ಈ ಸಂಬಂಧದಲ್ಲಿ ಮನ್ನಣೆ ನೀಡಿದ ಯಾವುದೇ ಸಂಸ್ಥೆಯಿಂದ ಸೂಲಗಿತ್ತಿ ತರಬೇತಿಯ ಒಂದು ಪ್ರಮಾಣ ಪತ್ರವನ್ನು ಹೊಂದಿರುವ ವ್ಯಕ್ತಿ;

(ಜೆ) "ಅಧಿಸೂಚನೆ" ಎಂದರೆ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಒಂದು ಅಧಿಸೂಚನೆ;

(ಕೆ) "ದಾದಿ" ಎಂದರೆ ಪರಿಷತ್ತಿನಿಂದ ಈ ಸಂಬಂಧದಲ್ಲಿ ಮನ್ನಣೆ ಪಡೆದ ಯಾವುದೇ ಸಂಸ್ಥೆಯಿಂದ ದಾದಿ ತರಬೇತಿಯ ಒಂದು ಪ್ರಮಾಣ ಪತ್ರವನ್ನು ಹೊಂದಿರುವ ವ್ಯಕ್ತಿ;

(ಎಲ್) "ದಾದಿಯರ ಸಂಸ್ಥೆ" ಎಂದರೆ ಲಾಭಕ್ಕಾಗಿ ಅಥವಾ ಲಾಭವಿಲ್ಲದೆ, ದಾದಿಯರು, ಸೂಲಗಿತ್ತಿಯರು, ಸಹಾಯಕ ದಾದಿ - ಸೂಲಗಿತ್ತಿಯರು ಮತ್ತು ಆರೋಗ್ಯ ಸಂದರ್ಶಕರ ಸೇವೆ ಅಗತ್ಯವಿರುವವರಿಗೆ ದಾದಿಯರಾಗಿ, ಸೂಲಗಿತ್ತಿಯರಾಗಿ, ಸಹಾಯಕ ದಾದಿ-ಸೂಲಗಿತ್ತಿಯರಾಗಿ ಮತ್ತು ಆರೋಗ್ಯ ಸಂದರ್ಶಕರಾಗಿ ಕಾರ್ಯ ನಿರ್ವಹಿಸುವ ವ್ಯಕ್ತಿಗಳ ಸೇವೆಯನ್ನು ಒದಗಿಸುವ ಅಥವಾ ಒದಗಿಸಲು ಉದ್ದೇಶಿಸಿರುವ ಯಾವುದೇ ಸಂಸ್ಥೆ;

(ಎಂ) "ನಿಯಮಿಸಲಾದುದು" ಎಂದರೆ ನಿಯಮಗಳ ಮೂಲಕ ನಿಯಮಿಸಲಾದುದು;

(ಎನ್) "ನೋಂದಣಿ ಪುಸ್ತಕ" ಎಂದರೆ 12 ನೇ ಪ್ರಕರಣದ ಅಡಿಯಲ್ಲಿ, ನಿರ್ವಹಿಸಲಾಗುವ ಒಂದು ನೋಂದಣಿ ಪುಸ್ತಕ ಮತ್ತು "ನೋಂದಾಯಿತ" ಮತ್ತು "ನೋಂದಣಿ" ಎಂಬ ಪದಾವಳಿಗಳನ್ನು ತದನುಸಾರವಾಗಿ ಅರ್ಥೈಸತಕ್ಕದ್ದು;

(ಒ) "ನೋಂದಾಯಿತ ವೈದ್ಯ ವೃತ್ತಿ ನಿರತ" ಎಂದರೆ ಆಯುರ್ವೇದ, ಯುನಾನಿ, ಹೋಮಿಯೋಪತಿ ಅಥವಾ ನೂತನ ವೈದ್ಯಪದ್ಧತಿಯ ವೃತ್ತಿನಿರತ ನೋಂದಣಿಯನ್ನು ನಿಯಂತ್ರಿಸಲು ರಾಜ್ಯದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ನೋಂದಾಯಿತನಾದ ಒಬ್ಬ ವ್ಯಕ್ತಿ;

(ಪಿ) "ನಿಯಮ" ಎಂದರೆ 29 ನೇ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರವು ರಚಿಸಿದ ಒಂದು ನಿಯಮ.

## ಭಾಗ-II

## [1][ಕರ್ನಾಟಕ ಶುಶ್ರೂಷಾ ಪರಿಷತ್ತು][1]

**3. ಪರಿಷತ್ತಿನ ಸ್ಥಾಪನೆ, ನಿಗಮನ ಮತ್ತು ರಚನೆ.-** (1) ರಾಜ್ಯ ಸರ್ಕಾರವು ಅಧಿಸೂಚನೆ ಹೊರಡಿಸಿ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ [1][ಕರ್ನಾಟಕ ಶುಶ್ರೂಷಾ ಪರಿಷತ್ತು][1] ಎಂದು ಕರೆಯಲಾಗುವ ಒಂದು ಪರಿಷತ್ತನ್ನು ಸ್ಥಾಪಿಸಬಹುದು ಮತ್ತು ಅಂಥ ಪರಿಷತ್ತು ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ಸ್ವತ್ತನ್ನು ಆರ್ಜಿಸುವ, ಧಾರಣ ಮಾಡುವ ಮತ್ತು ವಿಲೆ ಮಾಡುವ ಹಾಗೂ ಕರಾರು ಮಾಡಿಕೊಳ್ಳುವ ಅಧಿಕಾರದೊಂದಿಗೆ ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಅದು, ಅದೇ ಹೆಸರಿನಿಂದ ದಾವೆ ಹೂಡಬಹುದು ಮತ್ತು ದಾವೆಗೆ ಗುರಿಯಾಗಬಹುದು.

**1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.**

(2) ಪರಿಷತ್ತು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು:-

(ಎ) ಪದನಿಮಿತ್ತ ಸದಸ್ಯರಾಗಿ,-

[1][(i) ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಯೋಜನಾ ಸೇವೆಗಳ ನಿರ್ದೇಶಕರು ಅಥವಾ ರಾಜ್ಯ ಸರ್ಕಾರವು ನಾಮನಿರ್ದೇಶಿಸಬಹುದಾದ ಇತರ ಅಧಿಕಾರಿ;][1]

**1. (i), (ii)ನೇ ಖಾಬುಗಳಿಗೆ ಬದಲಾಗಿ ಇದನ್ನು ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.**

(iii) ಶೂಶ್ರೂಷಾ ಸೇವೆಗಳ ಅಧೀಕ್ಷಕರು, [1][ಕರ್ನಾಟಕ ಸರ್ಕಾರ][1] ;

**1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.**

(ಬಿ) ಚುನಾಯಿತ ಸದಸ್ಯರಾಗಿ,-

(i) ನೋಂದಣಿ ಪುಸ್ತಕದಲ್ಲಿ ನೋಂದಾಯಿತರಾಗಿರುವ (ಎಎ) ದಾದಿಯರು, (ಬಿಬಿ) ಸೂಲಗಿತ್ತಿಯರು, (ಸಿಸಿ) ಸಹಾಯಕ ದಾದಿ-ಸೂಲಗಿತ್ತಿಯರು ಮತ್ತು (ಡಿಡಿ) ಆರೋಗ್ಯ ಸಂದರ್ಶಕರು ತಮ್ಮ ಪೈಕಿಯಿಂದ ಚುನಾಯಿಸಬೇಕಾಗಿರುವ ಎಂಟು ಮಂದಿ, ಪ್ರತಿಯೊಂದು ಪ್ರವರ್ಗದಿಂದ ಚುನಾಯಿಸಬೇಕಾದ ವ್ಯಕ್ತಿಗಳ ಸಂಖ್ಯೆಯನ್ನು, ನೋಂದಣಿ ಪುಸ್ತಕದಲ್ಲಿ ಆ ಸದಸ್ಯರ ಸಂಖ್ಯೆಯ ಪ್ರಮಾಣಕ್ಕನುಸಾರವಾಗಿರುವ ಹಾಗೆ ವಿಭಜಿಸಬೇಕು:

ಪರಂತು, ಸದರಿ ಪ್ರಮಾಣವನ್ನು ನಿರ್ಧರಿಸುವಾಗ, ಅರ್ಧ ಅಥವಾ ಅದಕ್ಕಿಂತ ಕಡಿಮೆಯ ಭಾಗವನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದಲ್ಲ ಮತ್ತು ಅರ್ಧಕ್ಕಿಂತ ಹೆಚ್ಚಿನ ಭಾಗವನ್ನು ಒಂದು ಎಂಬಂತೆ ಲೆಕ್ಕ ಮಾಡತಕ್ಕದ್ದು:

ಅಲ್ಲದೆ ಪರಂತು, ಯಾವುದೇ ನಿರ್ದಿಷ್ಟ ಪ್ರವರ್ಗವನ್ನು ಪ್ರತಿನಿಧಿಸಿ ಚುನಾಯಿತರಾಗಬೇಕಾದ ಸದಸ್ಯರ ಸಂಖ್ಯೆಯು ಕನಿಷ್ಠ ಪಕ್ಷ ಒಂದು ಆಗಿರತಕ್ಕದ್ದು.

(ii) ಸಂಯೋಜಿತ ಸಂಸ್ಥೆಗಳ ಮುಖ್ಯಸ್ಥರು ತಮ್ಮ ಪೈಕಿಯಿಂದ ಚುನಾಯಿಸಬೇಕಾದ ಇಬ್ಬರು;

(iii) [1][ಕರ್ನಾಟಕ ರಾಜ್ಯ][1] ದಲ್ಲಿ ಸಂಯೋಜಿತ ಸಂಸ್ಥೆಗಳ ಮೇಟ್ರನ್‌ಗಳು ಮತ್ತು ಶೂಶ್ರೂಷಾ ಅಧೀಕ್ಷಕರು ತಮ್ಮ ಪೈಕಿಯಿಂದ ಚುನಾಯಿಸಬೇಕಾದ ಇಬ್ಬರು;

**1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.**

(iv) ಸಂಯೋಜಿತ ಸಂಸ್ಥೆಗಳ ಸಿಸ್ಟರ್ ಟ್ಯೂಟರ್‌ಗಳು ತಮ್ಮ ಪೈಕಿಯಿಂದ ಚುನಾಯಿಸಬೇಕಾದ ಒಬ್ಬ ವ್ಯಕ್ತಿ;

(v) [1][ಕರ್ನಾಟಕ ವೈದ್ಯಕೀಯ ಪರಿಷತ್ತಿ][1] ನಿಂದ ಚುನಾಯಿತನಾಗಬೇಕಾದ ಒಬ್ಬ ವ್ಯಕ್ತಿ;

(vi) ಭಾರತೀಯ ವೈದ್ಯಕೀಯ ಸಂಘದ [1][ಕರ್ನಾಟಕ ರಾಜ್ಯ ಶಾಖೆ][1] ಯಿಂದ (ಯಾವುದೇ ಹೆಸರಿಂದ ಕರೆಯಲಿ) ಚುನಾಯಿತನಾಗಬೇಕಾದ ಒಬ್ಬ ವ್ಯಕ್ತಿ;

(vii) ಭಾರತದ ತರಬೇತಿ ಪಡೆದ ದಾದಿಯರ ಸಂಘದ [1][ಕರ್ನಾಟಕ ರಾಜ್ಯ ಶಾಖೆ][1] ಯಿಂದ ಚುನಾಯಿತನಾಗಬೇಕಾದ ಒಬ್ಬ ವ್ಯಕ್ತಿ;

(ಸಿ) ರಾಜ್ಯ ಸರ್ಕಾರವು ಮೂವರು ವ್ಯಕ್ತಿಗಳನ್ನು ನಾಮನಿರ್ದೇಶಿತ ಸದಸ್ಯರಾಗಿ ನಾಮ ನಿರ್ದೇಶಿಸಬೇಕು. ಅವರಲ್ಲಿ ಒಬ್ಬರಾದರೂ ಮಹಿಳೆಯಾಗಿರತಕ್ಕದ್ದು:

**1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.**

ಪರಂತು, ಮೊದಲ ಪರಿಷತ್ತಿಗೆ ಸಂಬಂಧಪಟ್ಟಂತೆ (ಬಿ) ಖಂಡದ ಅಡಿಯಲ್ಲಿ ಚುನಾಯಿತರಾಗಬೇಕಾದ ಸದಸ್ಯರನ್ನು, ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ಚುನಾಯಕ ಗಣದಲ್ಲಿ ಅಥವಾ ಸಂಬಂಧಪಟ್ಟ ನಿಕಾಯದಲ್ಲಿ ಸೇರಿಸಿಕೊಳ್ಳಲು ಹಕ್ಕುಳ್ಳ ವ್ಯಕ್ತಿಗಳ ಪೈಕಿಯಿಂದ ರಾಜ್ಯ ಸರ್ಕಾರವು ನಾಮ ನಿರ್ದೇಶಿಸತಕ್ಕದ್ದು ಮತ್ತು ಅವರು ಎರಡು ವರ್ಷಗಳ ಅವಧಿಯವರೆಗೆ ಆ ಹುದ್ದೆಯಲ್ಲಿರತಕ್ಕದ್ದು.

(3) ಪರಿಷತ್ತಿನ ಅಧ್ಯಕ್ಷನನ್ನು ಮತ್ತು ಉಪಾಧ್ಯಕ್ಷನನ್ನು ಪರಿಷತ್ತಿನ ಸದಸ್ಯರ ಪೈಕಿಯಿಂದ ಚುನಾಯಿಸತಕ್ಕದ್ದು.

(4) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ಚುನಾವಣೆಯು, ನಿಯಮಿಸಬಹುದಾದಂಥ ವೇಳೆಯಲ್ಲಿ ಮತ್ತು ಸ್ಥಳದಲ್ಲಿ ಮತ್ತು ಅಂಥ ರೀತಿಯಲ್ಲಿ ನಡೆಯತಕ್ಕದ್ದು.

**4. ಚುನಾವಣೆ ನಡೆಯದ ಸಂದರ್ಭದಲ್ಲಿ ಸದಸ್ಯರ ನೇಮಕ.–** 3ನೇ ಪ್ರಕರಣದಲ್ಲಿ ಉಲ್ಲೇಖಿಸಿರುವ ಯಾವುವೇ ಚುನಾಯಕ ಗಣಗಳು ಅಥವಾ ನಿಕಾಯಗಳು, ನಿಯಮಿಸಬಹುದಾದಂಥ ದಿನಾಂಕದೊಳಗೆ ಪರಿಷತ್ತಿನ ಸದಸ್ಯನಾಗಿ ಒಬ್ಬನನ್ನು ಚುನಾಯಿಸದಿದ್ದರೆ, ರಾಜ್ಯ ಸರ್ಕಾರವು, ಅಧಿಸೂಚನೆ ಹೊರಡಿಸಿ ಹಾಗೆ ಚುನಾಯಿತನಾಗಲು ಅರ್ಹತೆ ಪಡೆದಿರುವ ಒಬ್ಬ ವ್ಯಕ್ತಿಯನ್ನು ಆ ಖಾಲಿ ಸ್ಥಾನಕ್ಕೆ ನೇಮಕ ಮಾಡತಕ್ಕದ್ದು; ಮತ್ತು ಹಾಗೆ ನೇಮಕಗೊಂಡ ವ್ಯಕ್ತಿಯು, ಸದರಿ ಚುನಾಯಕ ಗಣದಿಂದ ಅಥವಾ ನಿಕಾಯದಿಂದ ಕ್ರಮಬದ್ಧವಾಗಿ ಚುನಾಯಿತನಾಗಿದ್ದರೆ ಹೇಗೋ ಹಾಗೆ ಪರಿಷತ್ತಿನ ಒಬ್ಬ ಸದಸ್ಯನಾಗಿರುವನೆಂದು ಭಾವಿಸತಕ್ಕದ್ದು.

**5. ಸದಸ್ಯರ ಪದಾವಧಿ.–** (1) 3ನೇ ಪ್ರಕರಣದ (2) ನೇ ಉಪ ಪ್ರಕರಣದ (ಎ) ಖಂಡದಲ್ಲಿ ನಿರ್ದಿಷ್ಟಪಡಿಸಿರುವ ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ, ಪರಿಷತ್ತಿನ ಸದಸ್ಯರು ತಮ್ಮ ಚುನಾವಣೆಯ ಅಥವಾ ನಾಮನಿರ್ದೇಶನದ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಅಥವಾ ಅವರ ಉತ್ತರಾಧಿಕಾರಿಯನ್ನು ಯುಕ್ತವಾಗಿ ಚುನಾಯಿಸುವವರೆಗೆ ಅಥವಾ ನಾಮನಿರ್ದೇಶನ ಮಾಡುವವರೆಗೆ, ಇದರಲ್ಲಿ ಯಾವುದು ದೀರ್ಘವೋ ಅಲ್ಲಿಯವರೆಗೆ ಪದವನ್ನು ಹೊಂದಿರತಕ್ಕದ್ದು ಮತ್ತು ಅವರು ಸಂದರ್ಭಾನುಸಾರ ಮರುಚುನಾವಣೆಗೆ ಅಥವಾ ಮರು ನಾಮನಿರ್ದೇಶನಕ್ಕೆ ಅರ್ಹರಾಗಿರತಕ್ಕದ್ದು.

(2) ಯಾರೇ ಅಂಥ ಸದಸ್ಯನು, ಯಾವುದೇ ಸಮಯದಲ್ಲಿ ಪರಿಷತ್ತಿನ ಅಧ್ಯಕ್ಷರನ್ನು ಸಂಭೋದಿಸಿ ಬರೆದ ಪತ್ರದ ಮೂಲಕ ತನ್ನ ಹುದ್ದೆಗೆ ರಾಜೀನಾಮೆ ನೀಡಬಹುದು.

**6. ಖಾಲಿ ಸ್ಥಾನ.–** ಪರಿಷತ್ತಿನ ಒಬ್ಬ ಸದಸ್ಯನ ಹುದ್ದೆಯು ಅವನ ಹುದ್ದೆಯ ಅವಧಿ ಮುಗಿಯುವುದಕ್ಕೆ ಮುಂಚೆ ಮರಣದಿಂದ, ರಾಜೀನಾಮೆಯಿಂದ, ತೆಗೆದುಹಾಕುವಿಕೆಯಿಂದ ಅಥವಾ ಅವನ ಅಸಮರ್ಥತೆಯಿಂದ ಅಥವಾ ಅನ್ಯಥಾ ಖಾಲಿಯಾದರೆ, ಅಂಥ ಖಾಲಿ ಸ್ಥಾನವನ್ನು ನಿಯಮಿಸಲಾದ ರೀತಿಯಲ್ಲಿ ಭರ್ತಿ ಮಾಡತಕ್ಕದ್ದು. ಆಕಸ್ಮಿಕ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಚುನಾಯಿತನಾದ ಅಥವಾ ನಾಮನಿರ್ದೇಶಿತನಾದ ಯಾರೇ ವ್ಯಕ್ತಿಯು 5ನೇ ಪ್ರಕರಣದಲ್ಲಿ ಏನೇ ಇದ್ದರೂ, ಯಾವ ಸದಸ್ಯನ ಸ್ಥಳದಲ್ಲಿ ಅವನು ಚುನಾಯಿತನಾಗಿರುವನೋ ಅಥವಾ ನಾಮನಿರ್ದೇಶಿತನಾಗಿರುವನೋ ಆ ಸದಸ್ಯನ ಸ್ಥಾನವು ಖಾಲಿಯಾಗಿರದಿದ್ದರೆ, ಅವನು ಪದಧಾರಣ ಮಾಡಬಹುದಾಗಿದ್ದ ಅವಧಿಯವರೆಗೆ ಮಾತ್ರ ಪದಧಾರಣ ಮಾಡತಕ್ಕದ್ದು.

**7. ಖಾಲಿ ಸ್ಥಾನವು ವ್ಯವಹರಣೆಗಳ ಮೇಲೆ ಪರಿಣಾಮ ಬೀರದಿರುವುದು.–** ಪರಿಷತ್ತಿನ ಒಬ್ಬ ಸದಸ್ಯನ ಹುದ್ದೆಯು ಖಾಲಿಯಾದಾಗ, ಅದರ ಮುಂದುವರೆಯುತ್ತಿರುವ ಸದಸ್ಯರ ಸ್ಥಾನವು ಖಾಲಿಯಾಗಿಲ್ಲವೆಂಬಂತೆ ಕಾರ್ಯನಿರ್ವಹಿಸತಕ್ಕದ್ದು ಮತ್ತು ಪರಿಷತ್ತಿನ ಯಾವುದೇ ಕಾರ್ಯವು ಅಥವಾ ವ್ಯವಹರಣೆಯು ಪರಿಷತ್ತಿನಲ್ಲಿ ಒಂದು ಸ್ಥಾನವು ಖಾಲಿಯಾಗಿರುವ ಕಾರಣ ಮಾತ್ರದಿಂದಲೇ ಪರಿಷತ್ತಿನ ಒಬ್ಬ ಸದಸ್ಯನಾಗಿ ಕಾರ್ಯ ನಿರ್ವಹಿಸುತ್ತಿರುವ ವ್ಯಕ್ತಿಯ ಅನರ್ಹತೆಯ ಅಥವಾ ಅವನ ಚುನಾವಣೆಯ ಅಥವಾ ನಾಮನಿರ್ದೇಶನದಲ್ಲಿನ ದೋಷದ ಕಾರಣ ಮಾತ್ರದಿಂದಲೇ ಅಸಿಂಧುವಾಗಿದೆಯೆಂದು ಭಾವಿಸತಕ್ಕದ್ದಲ್ಲ.

**8. ಅನರ್ಹತೆಗಳು.–** ಒಬ್ಬ ವ್ಯಕ್ತಿಯನ್ನು ಈ ಮುಂದಿನ ಕಾರಣಗಳಿಗಾಗಿ ಪರಿಷತ್ತಿನ ಒಬ್ಬ ಸದಸ್ಯನಾಗಿ ಚುನಾಯಿತನಾಗಲು ಅಥವಾ ಸದಸ್ಯನಾಗಿರಲು ಅನರ್ಹಗೊಳಿಸತಕ್ಕದ್ದು, ಎಂದರೆ:–

(ಎ) ನೈತಿಕ ಅಧಃಪತನವನ್ನು ಒಳಗೊಂಡ ಮತ್ತು ಮೂರು ತಿಂಗಳಿಗೆ ಮೀರುವ ಕಾರಾವಾಸದಿಂದ ದಂಡನೀಯವಾದ ಅಪರಾಧಕ್ಕಾಗಿ ಕ್ರಿಮಿನಲ್ ನ್ಯಾಯಾಲಯವು ಅವನಿಗೆ ಶಿಕ್ಷೆ ವಿಧಿಸಿದ್ದರೆ ಮತ್ತು ಅಂಥ ಶಿಕ್ಷೆಯನ್ನು ಆ ತರುವಾಯ ವಿಪರ್ಯಯಗೊಳಿಸಿರದಿದ್ದರೆ, ರದ್ದುಗೊಳಿಸಿರದಿದ್ದರೆ ಅಥವಾ ಮಾಫಿ ಮಾಡಿರದಿದ್ದರೆ ಮತ್ತು ಈ ಸಂಬಂಧದಲ್ಲಿ ಆದೇಶವನ್ನು ಹೊರಡಿಸಲು ಅಧಿಕಾರ ಹೊಂದಿರುವ ರಾಜ್ಯ ಸರ್ಕಾರವು ಆದೇಶದ ಮೂಲಕ ಅಂಥ ಶಿಕ್ಷೆಯ ಕಾರಣದಿಂದಾಗಿ ಉದ್ಭವಿಸುವ ಅನರ್ಹತೆಯಿಂದ ಅವನನ್ನು ಮುಕ್ತಗೊಳಿಸಿದ್ದ ಹೊರತು; ಅಥವಾ

(ಬಿ) ಅವನು ಅವಿಮುಕ್ತ ದಿವಾಳಿಯಾಗಿದ್ದರೆ; ಅಥವಾ

(ಸಿ) ಅವನು ಅಸ್ವಸ್ಥ ಚಿತ್ತನಾಗಿದ್ದು, ಸಕ್ಷಮ ನ್ಯಾಯಾಲಯವು ಹಾಗೆಂದು ಘೋಷಿಸಿದ್ದರೆ; ಅಥವಾ

(ಡಿ) ಅವನ ಹೆಸರನ್ನು ನೋಂದಣಿ ಪುಸ್ತಕದಿಂದ ತೆಗೆದುಹಾಕಿದ್ದರೆ; ಅಥವಾ

(ಇ) ಅವನು ಪರಿಷತ್ತಿನ ಪೂರ್ಣಕಾಲಿಕ ಅಧಿಕಾರಿ ಅಥವಾ ನೌಕರನಾಗಿದ್ದರೆ.

**9. ಸದಸ್ಯನಾಗಿ ಮುಂದುವರಿಯಲು ಅಸಮರ್ಥತೆ.–** (1) ಯಾರೇ ಸದಸ್ಯನು, ಅವನು ಚುನಾಯಿತನಾದ ಅಥವಾ ನಾಮನಿರ್ದೇಶಿತನಾದ ಅವಧಿಯಲ್ಲಿ,–

(ಎ) ಪರಿಷತ್ತಿನ ಅಭಿಪ್ರಾಯದಲ್ಲಿ ಸಾಕಷ್ಟು ಕಾರಣಗಳಿಲ್ಲದೆ ಅವನು ಅದರ ಮೂರು ನಿರಂತರ ಸಾಮಾನ್ಯ ಸಭೆಗಳಿಗೆ ಗೈರುಹಾಜರಾದರೆ; ಅಥವಾ

(ಬಿ) ನಿರಂತರವಾಗಿ ಎಂಟು ತಿಂಗಳನ್ನು ಮೀರಿದ ಅವಧಿಯವರೆಗೆ ಭಾರತದಿಂದ ಗೈರುಹಾಜರಾದರೆ; ಅಥವಾ

(ಸಿ) ಅವನನ್ನು ಚುನಾಯಿಸಿದ ಚುನಾಯಕ ಗಣ ಅಥವಾ ನಿಕಾಯದ ಸದಸ್ಯನಾಗಿರುವುದು ನಿಂತುಹೋದರೆ; ಅಥವಾ

(ಡಿ) 8ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಅನರ್ಹತೆಗಳ ಪೈಕಿ ಯಾವುದೇ ಅನರ್ಹತೆಗೆ ಒಳಗಾದರೆ; ಅಥವಾ

(ಇ) [1][ಕರ್ನಾಟಕ ವೈದ್ಯಕೀಯ ಪರಿಷತ್ತಿ][1] ನಿಂದ ಚುನಾಯಿತನಾಗಿದ್ದು, ಒಬ್ಬ ನೋಂದಾಯಿತ ವೈದ್ಯಕೀಯ ವೃತ್ತಿನಿರತನಾಗಿರುವುದು ನಿಂತುಹೋದರೆ

–ಪರಿಷತ್ತಿನ ಅಧ್ಯಕ್ಷನು, ಆ ಸಂಗತಿಯನ್ನು ಕೂಡಲೇ ರಾಜ್ಯ ಸರ್ಕಾರಕ್ಕೆ ವರದಿ ಮಾಡತಕ್ಕದ್ದು ಮತ್ತು ಅದು ಆ ತರುವಾಯ, ಲಿಖಿತ ಆದೇಶ ಹೊರಡಿಸಿ ಅವನ ಸ್ಥಾನವು ಖಾಲಿಯಾಗಿದೆ ಎಂದು ಘೋಷಿಸತಕ್ಕದ್ದು.

**1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.**

(2) (1)ನೇ ಉಪ ಪ್ರಕರಣದ ಅಡಿಯಲ್ಲಿ ಒಂದು ಸ್ಥಾನವು ಖಾಲಿಯಾಗಿದೆಯೇ ಅಥವಾ ಇಲ್ಲವೆ ಎಂಬ ಪ್ರಶ್ನೆ ಉದ್ಭವಿಸಿದರೆ, ಅಂಥ ಪ್ರಶ್ನೆಗಳನ್ನು ನಿರ್ಧರಿಸುವಲ್ಲಿ ರಾಜ್ಯ ಸರ್ಕಾರದ ಆದೇಶವೇ ಅಂತಿಮವಾಗಿರತಕ್ಕದ್ದು.

**10. ಸದಸ್ಯರಿಗೆ ಗೈರುಹಾಜರಾಗಲು ಅನುಮತಿ.–** ಯಾರೇ ಸದಸ್ಯನು ಪರಿಷತ್ತಿನ ಸಭೆಗಳಿಗೆ ಆರು ತಿಂಗಳನ್ನು ಮೀರದ ಯಾವುದೇ ಅವಧಿಗೆ ಗೈರುಹಾಜರಾಗಲು ಪರಿಷತ್ತು ಅನುಮತಿ ನೀಡಬಹುದು.

**11. ಮತದಾನದ ಹಂಚಿಕೆ ಪದ್ಧತಿಯ ಮೂಲಕ ಚುನಾವಣೆಗಳನ್ನು ನಡೆಸುವುದು.–** ಈ ಅಧಿನಿಯಮದ ಅಡಿಯಲ್ಲಿ ಎಲ್ಲಾ ಚುನಾವಣೆಗಳನ್ನು ಮತದಾನದ ಹಂಚಿಕೆ ಪದ್ಧತಿಗನುಸಾರವಾಗಿ ನಡೆಸತಕ್ಕದ್ದು.

**ವಿವರಣೆ:–** ಮತದಾನದ ಹಂಚಿಕೆ ಪದ್ಧತಿ ಎಂದರೆ ಭರ್ತಿ ಮಾಡಬೇಕಾದ ಸ್ಥಾನಗಳು ಎಷ್ಟು ಇವೆಯೋ ಅಷ್ಟು ಮತ ನೀಡಲು ಪ್ರತಿಯೊಬ್ಬ ಮತದಾರನು ಹಕ್ಕುಳ್ಳವನಾಗಿರತಕ್ಕ ಮತದಾನದ ಒಂದು ಪದ್ಧತಿ:

ಪರಂತು, ಯಾರೇ ಮತದಾರನು, ಯಾರೇ ಒಬ್ಬ ಅಭ್ಯರ್ಥಿಗೆ ಒಂದಕ್ಕಿಂತ ಹೆಚ್ಚು ಮತಗಳನ್ನು ನೀಡತಕ್ಕದ್ದಲ್ಲ:

ಮತ್ತು ಪರಂತು, ಮತದಾರನು ತಾನು ನೀಡಲು ಹಕ್ಕುಳ್ಳವನಾಗಿರುವ ಎಲ್ಲಾ ಮತಗಳನ್ನು ದಾಖಲು ಮಾಡಿದ ಹೊರತು ಯಾವುದೇ ಮತ ಪತ್ರವು ಸಿಂಧುವಾಗಿರುವುದೆಂದು ಭಾವಿಸತಕ್ಕದ್ದಲ್ಲ.

## ಭಾಗ – III
## ನೋಂದಣಿ

**12. ನೋಂದಣಿ ಪುಸ್ತಕದ ನಿರ್ವಹಣೆ.–** ಪರಿಷತ್ತು, (ಎ) ದಾದಿಯರು, (ಬಿ) ಸೂಲಗಿತ್ತಿಯರು, (ಸಿ) ಸಹಾಯಕ ದಾದಿಯರು ಮತ್ತು (ಡಿ) ಆರೋಗ್ಯ ಸಂದರ್ಶಕರ ಒಂದು ನೋಂದಣಿ ಪುಸ್ತಕವನ್ನು ನಿರ್ವಹಿಸತಕ್ಕದ್ದು; ಮತ್ತು ಅದು ನಿಯಮಿಸಬಹುದಾದಂಥ ವಿವರಗಳನ್ನು ಒಳಗೊಂಡಿರುವ ಮತ್ತು ಅಷ್ಟು ಭಾಗಗಳಲ್ಲಿ ವಿಭಾಗಿಸಲಾದ ಅಂಥ ರೀತಿಯಲ್ಲಿ ನಾಲ್ಕು ವಿಭಾಗಗಳನ್ನು ಒಳಗೊಂಡಿರತಕ್ಕದ್ದು.

**13. ನೋಂದಣಿಗೆ ಹಕ್ಕುಳ್ಳ ವ್ಯಕ್ತಿಗಳು.–** ನಿಯಮಿಸಬಹುದಾದಂಥ ತರಬೇತಿ ಪಠ್ಯ ಕ್ರಮವನ್ನು ಪೂರೈಸಿ ಅಂಥ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಮತ್ತು ಅಂಥ ಇತರ ಷರತ್ತುಗಳನ್ನು ನೆರವೇರಿಸಿರುವ ಮತ್ತು ನಿಯಮಿಸಬಹುದಾದ ಫೀಜನ್ನು ಸಂದಾಯ ಮಾಡಿದ ಮೇಲೆ ನಿಯಮಿಸಲಾದ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸಿರುವ ವ್ಯಕ್ತಿಗಳು ನೋಂದಣಿಗೆ ಹಕ್ಕುಳ್ಳವರಾಗಿರತಕ್ಕದ್ದು.

**14. ನೋಂದಣಿಯನ್ನು ನಿರಾಕರಿಸುವುದು ಮತ್ತು ಹೆಸರುಗಳನ್ನು ತೆಗೆದುಹಾಕುವುದು ಮತ್ತು ಪುನಃ ನಮೂದಿಸುವುದು.–** (1) ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ಪರಿಷತ್ತು ಸಂಬಂಧಪಟ್ಟ ವ್ಯಕ್ತಿಗೆ, ತನ್ನ ಪ್ರತಿ ರಕ್ಷೆಗಾಗಿ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ಕೊಟ್ಟ ತರುವಾಯ ಮತ್ತು ನಿಯಮಿಸಬಹುದಾದ ರೀತಿಯಲ್ಲಿ ವಿಚಾರಣೆಯನ್ನು ಮಾಡಿದ ತರುವಾಯ ಯಾರೇ ವ್ಯಕ್ತಿಯ ಹೆಸರನ್ನು ನೋಂದಣಿ ಪುಸ್ತಕದಲ್ಲಿ ನಮೂದಿಸಲು ನಿರಾಕರಿಸಬಹುದು ಅಥವಾ ನೋಂದಣಿ ಪುಸ್ತಕದಿಂದ ಅಂಥ ವ್ಯಕ್ತಿಯ ಹೆಸರನ್ನು ತೆಗೆದು ಹಾಕಲು ಆದೇಶಿಸಬಹುದು.

(2 (1)ನೇ ಉಪ ಪ್ರಕರಣದ ಅಡಿಯಲ್ಲಿ ಹೊರಡಿಸಿದ ಆದೇಶವು ಲಿಖಿತದಲ್ಲಿರತಕ್ಕದ್ದು ಮತ್ತು ಅದನ್ನು ಸಂಬಂಧಪಟ್ಟ ವ್ಯಕ್ತಿಗೆ ನಿಯಮಿಸಲಾದ ರೀತಿಯಲ್ಲಿ ಜಾರಿ ಮಾಡತಕ್ಕದ್ದು.

(3) (1)ನೇ ಉಪ ಪ್ರಕರಣದ ಅಡಿಯಲ್ಲಿ ಯಾವ ವ್ಯಕ್ತಿಯ ವಿರುದ್ಧ ಒಂದು ಆದೇಶವನ್ನು ಹೊರಡಿಸಲಾಗಿದೆಯೋ ಆ ವ್ಯಕ್ತಿಯ ಹೆಸರನ್ನು ನೋಂದಣಿ ಪುಸ್ತಕದಲ್ಲಿ ನಮೂದಿಸತಕ್ಕದ್ದು ಅಥವಾ ಸಂದರ್ಭಾನುಸಾರ ಪುನರ್ ನಮೂದಿಸತಕ್ಕದ್ದು ಎಂಬುದನ್ನು ಪರಿಷತ್ತು ನಿರ್ದೇಶಿಸಬಹುದು.

**15. 14ನೇ ಪ್ರಕರಣದ ಅಡಿಯಲ್ಲಿನ ಅದೇಶದ ವಿರುದ್ಧ ಅಪೀಲು.–** (1) 14ನೇ ಪ್ರಕರಣದ ಅಡಿಯಲ್ಲಿ ಮಾಡಿದ ಪರಿಷತ್ತಿನ ಯಾವುದೇ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಅಂಥ ಆದೇಶವನ್ನು ಜಾರಿ ಮಾಡಿದ ದಿನಾಂಕದಿಂದ ತೊಂಬತ್ತು ದಿನಗಳೊಳಗಾಗಿ, ಅಂಥ ಆದೇಶದ ವಿರುದ್ಧ ರಾಜ್ಯ ಸರ್ಕಾರಕ್ಕೆ ಅಪೀಲು ಮಾಡಿಕೊಳ್ಳಬಹುದು.

(2) ಅಂಥ ಯಾವುದೇ ಅಪೀಲಿನ ಮೇಲೆ ರಾಜ್ಯ ಸರ್ಕಾರದ ಅದೇಶವು ಅಂತಿಮವಾಗಿರತಕ್ಕದ್ದು.

**16. ನವೀಕರಣ ಫೀಜು.–** (1) 13ನೇ ಪ್ರಕರಣದಲ್ಲಿ ಏನೇ ಇದ್ದರೂ, ಪರಿಷತ್ತು, ರಾಜ್ಯ ಸರ್ಕಾರದ ಪೂರ್ವ ಅನುಮತಿ ಪಡೆದು, ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತನಾದ ಪ್ರತಿಯೊಬ್ಬ ವ್ಯಕ್ತಿಯು, ನೋಂದಣಿ ಪುಸ್ತಕದಲ್ಲಿ ತನ್ನ ಹೆಸರನ್ನು ಮುಂದುವರಿಸಲು ಪ್ರತಿ ಮೂರು ವರ್ಷಕ್ಕೆ [1][ಐದು ರೂಪಾಯಿ][1] ನವೀಕರಣ ಫೀಜನ್ನು ಸಂದಾಯ ಮಾಡತಕ್ಕದ್ದೆಂದು ನಿರ್ದೇಶಿಸಬಹುದು.

**1. 1981ರ ಅಧಿನಿಯಮ 27ರ ಮೂಲಕ 9.4.1981ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.**

(2) ನವೀಕರಣದ ಫೀಜನ್ನು, ಪರಿಷತ್ತು ನಿಗದಿಪಡಿಸಿದ ದಿನಾಂಕಕ್ಕೆ ಮೊದಲು ಸಂದಾಯ ಮಾಡದಿದ್ದರೆ, ಪರಿಷತ್ತು, ಸಂಬಂಧಪಟ್ಟ ತಪ್ಪಿತಸ್ಥನಿಗೆ ನೋಟೀಸನ್ನು ಕೊಟ್ಟ ತರುವಾಯ, ನೋಂದಣಿ ಪುಸ್ತಕದಿಂದ ಅವನ ಹೆಸರನ್ನು ತೆಗೆದುಹಾಕಬಹುದು :

ಪರಂತು, ಹಾಗೆ ತೆಗೆದುಹಾಕಿದ ಹೆಸರನ್ನು, ಪರಿಷತ್ತು ಸಂಬಂಧಪಟ್ಟ ತಪ್ಪಿತಸ್ಥನಿಗೆ ಉಪವಿಧಿಗಳ ಮೂಲಕ ನೋಟೀಸನ್ನು ನೀಡಿದ ತರುವಾಯ, ಅದರಲ್ಲಿ ನಿರ್ದೇಶಿಸುವಂತಹ ರೀತಿಯಲ್ಲಿ ಹಾಗೂ ಅಂತಹ ಷರತ್ತುಗಳಿಗೆ ಒಳಪಟ್ಟು ನವೀಕರಣ ಫೀಜು ಸಂದಾಯವಾದ ಮೇಲೆ ಅವನ ಹೆಸರನ್ನು ಪುನ: ಸೇರಿಸಬಹುದು.

**17. ದಾದಿಯರು, ಸೂಲಗಿತ್ತಿಯರು, ಸಹಾಯಕ ದಾದಿ– ಸೂಲಗಿತ್ತಿಯರು ಮತ್ತು ಆರೋಗ್ಯ ಸಂದರ್ಶಕರಾಗಿ ವೃತ್ತಿಯನ್ನು ನಡೆಸುವ ವ್ಯಕ್ತಿಗಳ ಪಟ್ಟಿಯ ನಿರ್ವಹಣೆ.–** (1) ದಾದಿಯರು, ಸೂಲಗಿತ್ತಿಯರು, ಸಹಾಯಕ ದಾದಿ– ಸೂಲಗಿತ್ತಿಯರು ಮತ್ತು ಆರೋಗ್ಯ ಸಂದರ್ಶಕರಾಗಿ ವೃತ್ತಿಯನ್ನು ನಡೆಸುತ್ತಿರುವ ಯಾವ ವ್ಯಕ್ತಿಗಳ ಹೆಸರುಗಳು 12ನೇ ಪ್ರಕರಣದ ಅಡಿಯಲ್ಲಿ ನಿರ್ವಹಿಸಲಾಗುವ ನೋಂದಣಿ ಪುಸ್ತಕದಲ್ಲಿ ನಮೂದಿತವಾಗಿಲ್ಲವೋ ಆ ವ್ಯಕ್ತಿಗಳ ಹೆಸರುಗಳ ಒಂದು ಪಟ್ಟಿಯನ್ನು ಪರಿಷತ್ತು ತಯಾರಿಸಿ ಇಟ್ಟುಕೊಳ್ಳತಕ್ಕದ್ದು. ಪಟ್ಟಿಯನ್ನು, ಪರಿಷತ್ತು ನಿರ್ಧರಿಸಬಹುದಾದಂಥ ಭಾಗಗಳಾಗಿ ವಿಭಾಗಿಸತಕ್ಕದ್ದು.

(2) ಈ ಅಧಿನಿಯಮದ ಅಡಿಯಲ್ಲಿ ನೋಂದಣಿಗೆ ಅರ್ಹನಾಗಿಲ್ಲದ ಪ್ರತಿಯೊಬ್ಬ ವ್ಯಕ್ತಿಯು, ಈ ಭಾಗವು ಜಾರಿಗೆ ಬರುವ ದಿನಾಂಕದಿಂದ ಎರಡು ವರ್ಷಗಳ ಅವಧಿಯೊಳಗೆ, ತಾನು ಒಬ್ಬ ದಾದಿ, ಸೂಲಗಿತ್ತಿ, ಸಹಾಯಕ ದಾದಿ– ಸೂಲಗಿತ್ತಿ ಅಥವಾ ಅರೋಗ್ಯ ಸಂದರ್ಶಕ ಆಗಿ ನಿಯಮಿತವಾಗಿ ವೃತ್ತಿಯನ್ನು ನಡೆಸುತ್ತಿದ್ದೆನೆಂದು ಪರಿಷತ್ತಿಗೆ ಮನದಟ್ಟಾಗುವ ರೀತಿಯಲ್ಲಿ ರುಜುವಾತುಪಡಿಸಿ ಮತ್ತು ಪರಿಷತ್ತು ನಿರ್ಧರಿಸಬಹುದಾದಂಥ ಇತರ ಷರತ್ತುಗಳನ್ನು ಪೂರೈಸಿ, ನಿಯಮಿತ ಫೀಜನ್ನು ಸಂದಾಯ ಮಾಡಿದ ಮೇಲೆ ಪಟ್ಟಿಯಲ್ಲಿ ತನ್ನ ಹೆಸರನ್ನು ನಮೂದಿಸಿಕೊಳ್ಳಲು ಹಕ್ಕು ಹೊಂದಿರತಕ್ಕದ್ದು:

ಪರಂತು, ಯಾವುದೇ ವೃತ್ತಿಯ ಸಂಬಂಧದಲ್ಲಿ ಅಪಕೀರ್ತಿ ತರುವ ನಡತೆಗಾಗಿ ಈ ಅಧಿನಿಯಮದ ಅಡಿಯಲ್ಲಿ ಅಥವಾ ಭಾರತದ ಯಾವುದೇ ಭಾಗದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಅಡಿಯಲ್ಲಿ ನಿರ್ವಹಿಸಲಾದ ನೋಂದಣಿ ಪುಸ್ತಕದಿಂದ ಅಥವಾ ಯಾವುದೇ ಇತರ ದೇಶದ ನೋಂದಣಿ ಪುಸ್ತಕದಿಂದ ಹೆಸರನ್ನು ತೆಗೆದುಹಾಕಲಾದ ಯಾರೇ ವ್ಯಕ್ತಿಯು, ಪಟ್ಟಿಯಲ್ಲಿ ತನ್ನ ಹೆಸರನ್ನು ನಮೂದಿಸಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

(3) 14 ಮತ್ತು 15ನೇ ಪ್ರಕರಣಗಳ ಉಪಬಂಧಗಳು, ಯಥೋಚಿತ ವ್ಯತ್ಯಾಸಗಳೊಂದಿಗೆ ಪಟ್ಟಿಗೆ ಅನ್ವಯವಾಗತಕ್ಕದ್ದು.

## ಭಾಗ-IV

## ದಾದಿಯರು, ಸೂಲಗಿತ್ತಿಯರು, ಸಹಾಯಕ ದಾದಿ-ಸೂಲಗಿತ್ತಿಯರು ಮತ್ತು ಆರೋಗ್ಯ ಸಂದರ್ಶಕರು, ವೃತ್ತಿ ನಡೆಸುವುದಕ್ಕೆ ಹಕ್ಕುಳ್ಳವರಾಗಿರುವುದು ಮತ್ತು ಲೈಸೆನ್ಸು ಕೊಡುವ ಪ್ರಾಧಿಕಾರಿಗಳ ನಿಯಂತ್ರಣ

**18. ನೋಂದಾಯಿತರಾಗಿಲ್ಲದ ಅಥವಾ ಪಟ್ಟಿಯಲ್ಲಿ ಸೇರಿಸಿಲ್ಲದ ವ್ಯಕ್ತಿಗಳು ದಾದಿ ಮುಂತಾದವರುಗಳಾಗಿ ವೃತ್ತಿಯನ್ನು ನಡೆಸದಿರುವುದು.–** (1)ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತನಾದ ಅಥವಾ ಪಟ್ಟಿಯಲ್ಲಿ ಹೆಸರನ್ನು ನಮೂದಿಸಲಾಗಿರುವ ವ್ಯಕ್ತಿಯ ಹೊರತಾಗಿ ಯಾರೇ ವ್ಯಕ್ತಿಯು ಒಬ್ಬ ದಾದಿ, ಸೂಲಗಿತ್ತಿ, ಸಹಾಯಕ ದಾದಿ– ಸೂಲಗಿತ್ತಿ ಅಥವಾ ಆರೋಗ್ಯ ಸಂದರ್ಶಕನಾಗಿ ವೃತ್ತಿ ನಡೆಸತಕ್ಕದ್ದಲ್ಲ ಅಥವಾ ರೂಢಿಗತವಾಗಿ ಅಥವಾ ವೈಯಕ್ತಿಕ ಲಾಭಕ್ಕಾಗಿ ವೃತ್ತಿ ನಡೆಸುವ ರೀತಿಯಲ್ಲಿ, ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ತೋರ್ಪಡಿಸಿಕೊಳ್ಳತಕ್ಕದ್ದಲ್ಲ.

(2) (1)ನೇ ಉಪ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಕಾರ್ಯ ನಿರ್ವಹಿಸುವ ಯಾರೇ ವ್ಯಕ್ತಿಯು ಅಪರಾಧ ನಿರ್ಣೀತನಾದ ಮೇಲೆ, ಮೊದಲನೆಯ ಅಪರಾಧಕ್ಕಾಗಿ ಒಂದು ನೂರು ರೂಪಾಯಿಯವರೆಗಿನ ಜುಲ್ಮಾನೆಯಿಂದ, ಎರಡನೆಯ ಅಪರಾಧಕ್ಕಾಗಿ ಎರಡು ನೂರು ರೂಪಾಯಿವರೆಗಿನ ಜುಲ್ಮಾನೆಯಿಂದ ಮತ್ತು ತರುವಾಯದ ಯಾವುದೇ ಅಪರಾಧಕ್ಕಾಗಿ ಮೂರುನೂರು ರೂಪಾಯಿವರೆಗಿನ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**19. ಕೆಲವು ಪ್ರದೇಶಗಳಲ್ಲಿ ವೃತ್ತಿ ನಡೆಸಲು ಷರತ್ತುಗಳು.–** (1) 8ನೇ ಪ್ರಕರಣದಲ್ಲಿ ಏನೇ ಇದ್ದರೂ, ಹೆಸರನ್ನು ಪಟ್ಟಿಯಲ್ಲಿ ನಮೂದಿಸಲಾಗಿರುವ ವ್ಯಕ್ತಿಯು,–

(ಎ) ಈ ಪ್ರಕರಣವು ಜಾರಿಗೆ ಬರುವ ದಿನಾಂಕಕ್ಕೆ ಮೊದಲು ಐದು ವರ್ಷಗಳ ನಿರಂತರ ಅವಧಿಯವರೆಗೆ ಒಬ್ಬ ದಾದಿ, ಸೂಲಗಿತ್ತಿ, ಸಹಾಯಕ ದಾದಿ–ಸೂಲಗಿತ್ತಿ ಅಥವಾ ಆರೋಗ್ಯ ಸಂದರ್ಶಕನಾಗಿ ನಿಯಮಿತವಾಗಿ ವೃತ್ತಿ ನಡೆಸುತ್ತಿದ್ದ ಹೊರತು, ಅಥವಾ

(ಬಿ) ಈ ಪ್ರಕರಣವು ಜಾರಿಗೆ ಬರುವ ದಿನಾಂಕದ ಮೊದಲು ಎರಡು ವರ್ಷಗಳ ನಿರಂತರ ಅವಧಿವರೆಗೆ ಒಬ್ಬ ದಾದಿ, ಸೂಲಗಿತ್ತಿ, ಸಹಾಯಕ ದಾದಿ–ಸೂಲಗಿತ್ತಿ ಅಥವಾ ಆರೋಗ್ಯ ಸಂದರ್ಶಕನಾಗಿ ನಿಯಮಿತವಾಗಿ ವೃತ್ತಿ ನಡೆಸುತ್ತಿದ್ದು, ನಿಯಮಿಸಲಾದ ರೀತಿಯಲ್ಲಿ ಒಬ್ಬ ದಾದಿ, ಸೂಲಗಿತ್ತಿ, ಸಹಾಯಕ ದಾದಿ– ಸೂಲಗಿತ್ತಿ ಅಥವಾ ಆರೋಗ್ಯ ಸಂದರ್ಶಕ ಆಗಿ ತರಬೇತಿಯನ್ನು ಪಡೆದಿರುವುದಾಗಿ ಒಂದು ಸಂಸ್ಥೆಯ ಮ್ಯಾಟ್ರನ್, ವೈದ್ಯಕೀಯ ಅಧೀಕ್ಷಕ ಅಥವಾ ಆ ಸಂಸ್ಥೆಯ ಒಬ್ಬ ಜವಾಬ್ದಾರನಾದ ಅಧಿಕಾರಿಯು ರುಜು ಮಾಡಿದ ಒಂದು ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದ ಹೊರತು

– ಪುರಸಭಾ ನಿಗಮ ಅಥವಾ ಇತರ ಪುರಸಭಾ ನಿಕಾಯ ಅಥವಾ (2) ನೇ ಉಪ ಪ್ರಕರಣದ ಅಡಿಯಲ್ಲಿ ಅಧಿಸೂಚಿಸಲಾದ ಒಂದು ಪ್ರದೇಶದಲ್ಲಿ ಒಬ್ಬ ದಾದಿ, ಸೂಲಗಿತ್ತಿ, ಸಹಾಯಕ ದಾದಿ– ಸೂಲಗಿತ್ತಿ ಅಥವಾ ಆರೋಗ್ಯ ಸಂದರ್ಶಕನಾಗಿ ವೃತ್ತಿ ನಡೆಸತಕ್ಕದ್ದಲ್ಲ.

(2) ರಾಜ್ಯ ಸರ್ಕಾರವು, ಒಂದು ತಾಲೂಕಿನ ತಾಲೂಕು ಅಭಿವೃದ್ಧಿ ಮಂಡಲಿಯೊಂದಿಗೆ ಸಮಾಲೋಚಿಸಿದ ತರುವಾಯ ಅಧಿಸೂಚನೆ ಹೊರಡಿಸಿ, (1)ನೇ ಉಪಪ್ರಕರಣದ ಉಪಬಂಧಗಳು, ಪ್ರದೇಶದ ಸ್ಥಿತಿಗತಿಗಳನ್ನು ಗಮನದಲ್ಲಿರಿಸಿ ತಾನು ಸೂಕ್ತವೆಂದು ಪರಿಗಣಿಸಬಹುದಾದಂಥ ಅಳವಡಿಕೆ ಮತ್ತು ಮಾರ್ಪಾಟುಗಳಿಗೆ ಒಳಪಟ್ಟು ತಾಲೂಕಿನಲ್ಲಿ ಯಾವುದೇ ಇತರ ಪ್ರದೇಶಕ್ಕೆ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ದಿನಾಂಕದಿಂದ ಅನ್ವಯವಾಗತಕ್ಕದ್ದೆಂದು ನಿರ್ದೇಶಿಸಬಹುದು.

**20. ಲೈಸೆನ್ಸು ನೀಡಿಕೆ ಪ್ರಾಧಿಕಾರವು ಸಾಮಾನ್ಯ ಮೇಲ್ವಿಚಾರಣೆಯನ್ನು ನಡೆಸುವುದು.–** (1) ಈ ಅಧಿನಿಯಮದ ಮತ್ತು ಈ ಸಂಬಂಧದಲ್ಲಿ ರಚಿಸಲಾದ ನಿಯಮಗಳ ಮತ್ತು ಉಪವಿಧಿಗಳ ಉಪಬಂಧಗಳಿಗೆ ಒಳಪಟ್ಟು, ಪ್ರತಿಯೊಂದು ಲೈಸೆನ್ಸು ನೀಡಿಕೆ ಪ್ರಾಧಿಕಾರವು, ತನ್ನ ಆಧಿಕಾರ ವ್ಯಾಪ್ತಿಯ ಪ್ರದೇಶದೊಳಗೆ ವೃತ್ತಿ ನಡೆಸುತ್ತಿರುವ ದಾದಿಯರು, ಸೂಲಗಿತ್ತಿಯರು, ಸಹಾಯಕ ದಾದಿ– ಸೂಲಗಿತ್ತಿಯರು ಮತ್ತು ಆರೋಗ್ಯ ಸಂದರ್ಶಕರು ಇವರುಗಳ ಮೇಲೆ ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿಯಂತ್ರಣವನ್ನು ಚಲಾಯಿಸತಕ್ಕದ್ದು.

(2) ಲೈಸೆನ್ಸು ನೀಡಿಕೆ ಪ್ರಾಧಿಕಾರವು, ಈ ಪ್ರಕರಣ ಮತ್ತು 21ನೇ ಪ್ರಕರಣದ ಮೂಲಕ ತನಗೆ ಪ್ರದತ್ತವಾದ ಯಾವುವೇ ಕರ್ತವ್ಯಗಳನ್ನು ನೆರವೇರಿಸಲು ಮತ್ತು ಯಾವುವೇ ಅಧಿಕಾರಗಳನ್ನು ಚಲಾಯಿಸಲು ತನ್ನ ಯಾರೇ ಅಧಿಕಾರಿಗೆ ಅಧಿಕಾರ ನೀಡಬಹುದು.

**21. ವೃತ್ತಿಯನ್ನು ಪ್ರಾರಂಭಿಸುವುದಕ್ಕೆ ಮುಂಚೆ ಲೈಸೆನ್ಸು ನೀಡಿಕೆ ಪ್ರಾಧಿಕಾರಕ್ಕೆ ನೋಟೀಸು ಕೊಡುವುದು.–** (1) ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತನಾದ ಪ್ರತಿಯೊಬ್ಬ ವ್ಯಕ್ತಿಯು ಮತ್ತು ಪಟ್ಟಿಯಲ್ಲಿ ಹೆಸರು ನಮೂದಾಗಿರುವ ಪ್ರತಿಯೊಬ್ಬ ವ್ಯಕ್ತಿಯು, ಈ ಭಾಗವು ಜಾರಿಗೆ ಬರುವ ದಿನಾಂಕದ ತರುವಾಯ ಯಾವುದೇ ಪ್ರದೇಶದಲ್ಲಿ ವೃತ್ತಿಯನ್ನು ಮುಂದುವರಿಸಲು ಇಚ್ಛಿಸಿದರೆ ಅಥವಾ ಈ ಇಬ್ಬರು ವ್ಯಕ್ತಿಗಳ ಪೈಕಿ ಒಬ್ಬರು ದಾದಿಯಾಗಿ, ಸೂಲಗಿತ್ತಿಯಾಗಿ, ಸಹಾಯಕ ದಾದಿ– ಸೂಲಗಿತ್ತಿಯಾಗಿ ಅಥವಾ ಆರೋಗ್ಯ ಸಂದರ್ಶಕನಾಗಿ ಅಂಥ ಪ್ರದೇಶದಲ್ಲಿ ವೃತ್ತಿ ನಡೆಸಲು ಇಚ್ಛಿಸಿದರೆ, ಅವನು, ಲೈಸೆನ್ಸು ನೀಡಿಕೆ ಪಾಧಿಕಾರಕ್ಕೆ ಲಿಖಿತ ನೋಟೀಸನ್ನು ನೀಡತಕ್ಕದ್ದು ಮತ್ತು ಸದರಿ ಪ್ರದೇಶದೊಳಗೆ ಅವನು ವೃತ್ತಿಯನ್ನು ಮುಂದುವರಿಸುವ ಅವಧಿಯಲ್ಲಿ ಆ ತರುವಾಯದ ಪ್ರತಿ ಮೂರು ವರ್ಷಕ್ಕೊಮ್ಮೆ ಜನವರಿ ತಿಂಗಳಲ್ಲಿ ಸದರಿ ಪ್ರಾಧಿಕಾರಕ್ಕೆ ಅಂಥದ್ದೇ ಒಂದು ನೋಟೀಸನ್ನು ನೀಡತಕ್ಕದ್ದು.

(2) ಅಂಥ ಪ್ರತಿಯೊಂದು ನೋಟೀಸು, ಪರಿಷತ್ತು ನಿರ್ಧರಿಸಬಹುದಾದಂಥ ವಿವರಗಳನ್ನು ಒಳಗೊಂಡಿರತಕ್ಕದ್ದು ಮತ್ತು ಅಂಥ ನಮೂನೆಯಲ್ಲಿರತಕ್ಕದ್ದು.

(3) (1) ಮತ್ತು (2)ನೇ ಉಪಪ್ರಕರಣಗಳ ಉಪಬಂಧಗಳನ್ನು ಪಾಲಿಸಲು ತಪ್ಪುವ ಯಾರೇ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ ಮೊದಲನೆಯ ಅಪರಾಧಕ್ಕಾಗಿ ಇಪ್ಪತ್ತೈದು ರೂಪಾಯಿವರೆಗಿನ ಜುಲ್ಮಾನೆಯಿಂದ, ಎರಡನೆಯ ಅಪರಾಧಕ್ಕಾಗಿ ಐವತ್ತು ರೂಪಾಯಿವರೆಗಿನ ಜುಲ್ಮಾನೆಯಿಂದ ಮತ್ತು ತರುವಾಯದ ಯಾವುದೇ ಅಪರಾಧಕ್ಕಾಗಿ ಒಂದು ನೂರು ರೂಪಾಯಿವರೆಗಿನ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(4) ಯಾರೇ ವ್ಯಕ್ತಿಯು ತಿಳಿದೂ ತಿಳಿದೂ ಅಥವಾ ಉದ್ದೇಶಪೂರ್ವಕವಾಗಿ ಈ ಪ್ರಕರಣದ ಅಡಿಯಲ್ಲಿನ ಯಾವುದೇ ನೋಟೀಸಿನಲ್ಲಿ ಯಾವುದೇ ಸುಳ್ಳು ವಿವರಣೆಯನ್ನು ನೀಡಿದರೆ ಅಥವಾ ನೀಡುವಂತೆ ಮಾಡಿದರೆ ಅಥವಾ ಸುಳ್ಳು ವಿವರಣೆ ನೀಡಲು ಯಾರೇ ಇತರ ವ್ಯಕ್ತಿಯನ್ನು ದೊರಕಿಸಿಕೊಂಡರೆ ಅಪರಾಧ ನಿರ್ಣಯವಾದ ಮೇಲೆ, ಮೊದಲನೆಯ ಅಪರಾಧಕ್ಕಾಗಿ ಒಂದು ನೂರು ರೂಪಾಯಿವರೆಗಿನ ಜುಲ್ಮಾನೆಯಿಂದ, ಎರಡನೆಯ ಅಪರಾಧಕ್ಕಾಗಿ ಎರಡು ನೂರು ರೂಪಾಯಿವರೆಗಿನ ಜುಲ್ಮಾನೆಯಿಂದ ಮತ್ತು ಆ ತರುವಾಯದ ಯಾವುದೇ ಅಪರಾಧಕ್ಕಾಗಿ ಮೂರು ನೂರು ರೂಪಾಯಿವರೆಗಿನ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

## ಭಾಗ–V

## ದಾದಿಯರ ಕಾರ್ಯಸಂಸ್ಥೆಗಳು

**22. ದಾದಿಯರ ಕಾರ್ಯ ಸಂಸ್ಥೆಗಳ ವಿನಿಯಮ.–** (1) ಲೈಸೆನ್ಸು ನೀಡಿಕೆ ಪ್ರಾಧಿಕಾರವು ನೀಡಿದ ಒಂದು ಲೈಸೆನ್ಸಿನ ಮೇರೆಗಲ್ಲದೆ ಮತ್ತು ಅಂಥ ಲೈಸೆನ್ಸಿನಲ್ಲಿ ನಿರ್ದಿಷ್ಟಪಡಿಸಿರುವ ಪರಿಷತ್ತು ಅನುಮೋದಿಸಿದ ನಿಬಂಧನೆಗಳು ಮತ್ತು ಷರತ್ತುಗಳಿಗೆ ಅನುಸಾರವಾಗಿ ಅಲ್ಲದೆ ಯಾರೇ ವ್ಯಕ್ತಿಯು, ದಾದಿಯರ ಯಾವುದೇ ಕಾರ್ಯಸಂಸ್ಥೆಯನ್ನು ನಡೆಸತಕ್ಕದ್ದಲ್ಲ.

(2) ದಾದಿಯರ ಯಾವುದೇ ಕಾರ್ಯಸಂಸ್ಥೆಯನ್ನು ನಡೆಸಲು ಅಪೇಕ್ಷಿಸುವ ಯಾರೇ ವ್ಯಕ್ತಿಯು ನಿಯಮಿಸಬಹುದಾದಂಥ ದಿನಾಂಕಕ್ಕೆ ಮುಂಚೆ, ಅಂತಹ ರೀತಿಯಲ್ಲಿ ಮತ್ತು ಅಂಥ ನಮೂನೆಯಲ್ಲಿ ಲೈಸೆನ್ಸಿಗಾಗಿ ಲೈಸೆನ್ಸು ನೀಡಿಕೆ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸತಕ್ಕದ್ದು. ಅವನು ಅರ್ಜಿಯೊಂದಿಗೆ, ನಿಯಮಿಸಲಾದ ಫೀಜನ್ನು ಲೈಸೆನ್ಸು ನೀಡಿಕೆ ಪ್ರಾಧಿಕಾರಕ್ಕೆ ಸಂದಾಯ ಮಾಡತಕ್ಕದ್ದು ಮತ್ತು ಲೈಸೆನ್ಸು ಮಂಜೂರಾಗದಿದ್ದರೆ ಆ ಫೀಜಿನಲ್ಲಿ ಅರ್ಧ ಭಾಗವನ್ನು ಅವನಿಗೆ ಮರು ಪಾವತಿ ಮಾಡತಕ್ಕದ್ದು.

(3) ಲೈಸೆನ್ಸು ನೀಡಿಕೆ ಪ್ರಾಧಿಕಾರವು ಅಂಥ ಲೈಸೆನ್ಸನ್ನು ನೀಡುವುದಕ್ಕೆ ಮುಂಚೆ ಕಾರ್ಯ ಸಂಸ್ಥೆಯ ಸೂಕ್ತ ನಿರ್ವಹಣೆಗಾಗಿ ತಾನು ಸೂಕ್ತವೆಂದು ಭಾವಿಸಬಹುದಾದಂಥ ಹೆಚ್ಚಿನ ಷರತ್ತುಗಳನ್ನು ವಿಧಿಸಬಹುದು.

(4) ಲೈಸೆನ್ಸು ನೀಡಿಕೆ ಪ್ರಾಧಿಕಾರವು, ಸಂಬಂಧಪಟ್ಟ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ಕೊಟ್ಟ ತರುವಾಯ,–

(i) ಅರ್ಜಿದಾರನು ಅಥವಾ ಲೈಸೆನ್ಸುದಾರನು, ಇಪ್ಪತ್ತೊಂದು ವರ್ಷಕ್ಕಿಂತ ಕಡಿಮೆ ವಯಸ್ಸಿನವನಾಗಿದ್ದರೆ ಅಥವಾ ಅದರ ಅಭಿಪ್ರಾಯದಲ್ಲಿ ಅವನು ಅಂಥ ಲೈಸೆನ್ಸು ಹೊಂದಲು ಸೂಕ್ತ ವ್ಯಕ್ತಿಯಾಗಿಲ್ಲದಿದ್ದರೆ; ಅಥವಾ

(ii) ಸಂಸ್ಥೆಯ ಆವರಣಗಳು ಸೂಕ್ತವಾಗಿಲ್ಲದಿದ್ದರೆ; ಅಥವಾ

(iii) ಸಂಸ್ಥೆಯ ಸಂಬಂಧದಲ್ಲಿ ಈ ಪ್ರಕರಣದ ಅಡಿಯಲ್ಲಿನ ಯಾವುದೇ ಅಪರಾಧವನ್ನು ಮಾಡಿದ್ದರೆ

– ಯಾವುದೇ ಲೈಸೆನ್ಸನ್ನು ನೀಡಲು ನಿರಾಕರಿಸಬಹುದು ಅಥವಾ ಈಗಾಗಲೇ ನೀಡಲಾಗಿರುವ ಯಾವುದೇ ಲೈಸೆನ್ಸನ್ನು ರದ್ದುಗೊಳಿಸಬಹುದು.

(5) ಲೈಸೆನ್ಸು ನೀಡಿಕೆ ಪ್ರಾಧಿಕಾರವು ವಿಧಿಸಿದ ಯಾವುವೇ ಷರತ್ತುಗಳಿಂದ ಅಥವಾ ಯಾವುದೇ ಲೈಸೆನ್ಸಿನ ನಿರಾಕರಣೆಯಿಂದ ಅಥವಾ ಅದನ್ನು ರದ್ದುಗೊಳಿಸುವಿಕೆಯಿಂದ ಬಾಧಿತನಾದ ಯಾರೇ ವ್ಯಕ್ತಿಯು, ಷರತ್ತುಗಳ ಅಂಥ ವಿಧಿಸುವಿಕೆ, ನಿರಾಕರಣೆ ಅಥವಾ ರದ್ದುಗೊಳಿಸುವಿಕೆಯ ದಿನಾಂಕದಿಂದ ತೊಂಬತ್ತು ದಿವಸಗಳೊಳಗಾಗಿ ರಾಜ್ಯ ಸರ್ಕಾರಕ್ಕೆ ಅಪೀಲು ಸಲ್ಲಿಸಬಹುದು. ಅಪೀಲು ಜ್ಞಾಪನ ಪತ್ರವು ನಿಯಮಿಸಬಹುದಾದಂಥ ಫೀಜಿನೊಂದಿಗೆ ಇರತಕ್ಕದ್ದು. ಅಂಥ ಅಪೀಲಿನ ಮೇಲೆ ರಾಜ್ಯ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು.

(6) ಲೈಸೆನ್ಸು ನೀಡಿಕೆ ಪ್ರಾಧಿಕಾರವು, ಈ ಪ್ರಕರಣದ ಮೂಲಕ ಪ್ರದಾನ ಮಾಡಿದ ಯಾವುವೇ ಕರ್ತವ್ಯಗಳನ್ನು ನೆರವೇರಿಸಲು ತನ್ನ ಯಾರೇ ಅಧಿಕಾರಿಗಳಿಗೆ ಅಧಿಕಾರ ನೀಡಬಹುದು.

(7) ಈ ಸಂಬಂಧದಲ್ಲಿ ಲೈಸೆನ್ಸು ನೀಡಿಕೆ ಪ್ರಾಧಿಕಾರವು ವಿಧ್ಯುಕ್ತವಾಗಿ ಅಧಿಕಾರ ನೀಡಿದ ಯಾರೇ ಅಧಿಕಾರಿಯು, ಎಲ್ಲಾ ಯುಕ್ತ ಕಾಲದಲ್ಲಿ, ಯಾವುದೇ ಲೈಸೆನ್ಸಿನಲ್ಲಿ ಅಥವಾ ಲೈಸೆನ್ಸಿಗಾಗಿನ ಅರ್ಜಿಯಲ್ಲಿ ನಿರ್ದಿಷ್ಟಪಡಿಸಿರುವ ಆವರಣಗಳನ್ನು ಅಥವಾ ದಾದಿಯರ ಸಂಸ್ಥೆಯ ಉದ್ದೇಶಕ್ಕಾಗಿ ಅಥವಾ ಅದರ ಸಂಬಂಧದಲ್ಲಿ ಉಪಯೋಗಿಸಲಾಗಿರುವ ಅಥವಾ ಉಪಯೋಗಿಸಲಾಗಿದೆ ಎಂದು ನಂಬಲು ಅಧಿಕಾರಿಗೆ ಯುಕ್ತ ಕಾರಣವಿರುವ ಯಾವುವೇ ಆವರಣಗಳನ್ನು ಪ್ರವೇಶಿಸಬಹುದು ಮತ್ತು ಅಂಥ ಆವರಣಗಳನ್ನು ಮತ್ತು ಅಲ್ಲಿ ಇಟ್ಟಿರಬಹುದಾದ ಅಂಥ ಸಂಸ್ಥೆಗೆ ಸಂಬಂಧಪಡುವ ಯಾವುವೇ ದಾಖಲೆಗಳನ್ನು ಪರಿಶೀಲಿಸಬಹುದು.

(8) ಪರಿಷತ್ತು, (7) ನೇ ಉಪ ಪ್ರಕರಣದ ಮೂಲಕ ಪ್ರದಾನ ಮಾಡಲಾದ ಪ್ರವೇಶದ ಮತ್ತು ಪರಿಶೀಲನೆಯ ಅಧಿಕಾರಗಳನ್ನು ಈ ಸಂಬಂಧದಲ್ಲಿ ತಾನು ಅಧಿಕಾರ ನೀಡಿದ ತನ್ನ ಅಧಿಕಾರಿಗಳ ಮೂಲಕ ಸಹ ಚಲಾಯಿಸಬಹುದು. ಯಾವುದೇ ಪ್ರಕರಣದಲ್ಲಿ, ಲೈಸೆನ್ಸನ್ನು ನಿರಾಕರಿಸಬೇಕೆಂದು ಅಥವಾ ರದ್ದುಗೊಳಿಸಬೇಕೆಂದು ಪರಿಷತ್ತು ಅಭಿಪ್ರಾಯಪಟ್ಟರೆ, ಅದು, ಆ ವಿಷಯವನ್ನು ರಾಜ್ಯ ಸರ್ಕಾರಕ್ಕೆ ವರದಿ ಮಾಡತಕ್ಕದ್ದು. ಅಂತಹ ವರದಿಯನ್ನು ಸ್ವೀಕರಿಸಿದ ಮೇಲೆ, ರಾಜ್ಯ ಸರ್ಕಾರವು, ಲೈಸೆನ್ಸು ನೀಡಿಕೆ ಪ್ರಾಧಿಕಾರದೊಂದಿಗೆ ಸಮಾಲೋಚಿಸಿದ ತರುವಾಯ ಅಥವಾ ಅದು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ಮಾಡಿದ ತರುವಾಯ ಮತ್ತು ಸಂಬಂಧಪಟ್ಟ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ಕೊಟ್ಟ ತರುವಾಯ, ಲೈಸೆನ್ಸನ್ನು ನಿರಾಕರಿಸುವ ಅಥವಾ ರದ್ದುಗೊಳಿಸುವ ಆದೇಶವನ್ನು ಹೊರಡಿಸಬಹುದು, ಅಂಥ ಆದೇಶಗಳು ಅಂತಿಮವಾಗಿರತಕ್ಕದ್ದು.

(9) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯನ್ನು, ಅಪರಾಧ ನಿರ್ಣಯವಾದ ಮೇಲೆ, ಮೊದಲನೆಯ ಅಪರಾಧಕ್ಕಾಗಿ ಎರಡು ನೂರಾ ಐವತ್ತು ರೂಪಾಯಿವರೆಗಿನ ಜುಲ್ಮಾನೆಯಿಂದ ಮತ್ತು ತರುವಾಯದ ಯಾವುದೇ ಅಪರಾಧಕ್ಕಾಗಿ ಐದು ನೂರು ರೂಪಾಯಿಯವರೆಗಿನ ಜುಲ್ಮಾನೆಯಿಂದ ಅಥವಾ ಆರು ತಿಂಗಳವರೆಗಿನ ಸಾದಾ ಕಾರಾವಾಸದಿಂದ ಅಥವಾ ಅವೆರಡರಿಂದಲೂ ದಂಡಿಸತಕ್ಕದ್ದು.

(10) ಲೈಸೆನ್ಸು ನೀಡಿಕೆ ಪ್ರಾಧಿಕಾರಿಯು, ವಿಧ್ಯುಕ್ತವಾಗಿ ಅಧಿಕಾರ ನೀಡಿದ ಯಾರೇ ಅಧಿಕಾರಿಯನ್ನು ಅಥವಾ ಪರಿಷತ್ತಿನ ಯಾರೇ ಅಂಥ ಅಧಿಕಾರಿಯನ್ನು, ಯಾವುದೇ ಆವರಣವನ್ನು ಪ್ರವೇಶಿಸಲು ಅಥವಾ ಪರಿಶೀಲಿಸಲು ಅಥವಾ ಸಂದರ್ಭಾನುಸಾರ (7) ಅಥವಾ (8)ನೇ ಉಪಪ್ರಕರಣದ ಅಡಿಯಲ್ಲಿ ಯಾವುವೇ ದಾಖಲೆಗಳನ್ನು ಪರಿಶೀಲಿಸಲು ನಿರಾಕರಿಸುವ ಅಥವಾ ಮೇಲೆ ಹೇಳಲಾದ ಅವನ ಅಧಿಕಾರಗಳನ್ನು ಚಲಾಯಿಸುವುದಕ್ಕೆ ಅಂಥ ಅಧಿಕಾರಿಗೆ ಅಡ್ಡಿ ಮಾಡುವ ಯಾರೇ ವ್ಯಕ್ತಿಯನ್ನು, ಅಪರಾಧ ನಿರ್ಣಯವಾದ ಮೇಲೆ ಮೊದಲನೆಯ ಅಪರಾಧಕ್ಕಾಗಿ ಐವತ್ತು ರೂಪಾಯಿವರೆಗಿನ ಜುಲ್ಮಾನೆಯಿಂದ ಮತ್ತು ಯಾವುದೇ ತರುವಾಯದ ಅಪರಾಧಕ್ಕಾಗಿ ಒಂದು ನೂರು ರೂಪಾಯಿಯವರೆಗಿನ ಜುಲ್ಮಾನೆಯಿಂದ ಅಥವಾ ಮೂರು ತಿಂಗಳವರೆಗಿನ ಸಾದಾ ಕಾರಾವಾಸದಿಂದ ಅಥವಾ ಅವೆರಡರಿಂದಲೂ ದಂಡಿಸತಕ್ಕದ್ದು.

(11) ಈ ಪ್ರಕರಣದ ಅಡಿಯಲ್ಲಿ ಇಡಬೇಕಾದ ದಾಖಲೆಯಲ್ಲಿ ಈ ಅಧಿನಿಯಮದ ಯಾವುವೇ ಉದ್ದೇಶಗಳಿಗಾಗಿ ಯಾವುವೇ ಮುಖ್ಯ ವಿವರಗಳು ಸುಳ್ಳೆಂದು ತಿಳಿದಿರುವ ಯಾವುದೇ ನಮೂದನ್ನು ಮಾಡುವ ಅಥವಾ ಮಾಡಿಸುವ ಅಥವಾ ತಿಳಿದೂ ತಿಳಿದೂ ಅನುಮತಿಸುವ ಅಥವಾ ಈ ಪ್ರಕರಣದ ಅಡಿಯಲ್ಲಿ ಒಂದು ಲೈಸೆನ್ಸನ್ನು ಪಡೆಯುವ ಉದ್ದೇಶಕ್ಕಾಗಿ ಅಥವಾ ಈ ಅಧಿನಿಯಮದ ಯಾವುದೇ ಇತರ ಉದ್ದೇಶಕ್ಕಾಗಿ ಯಾವುವೇ ಮುಖ್ಯ ವಿವರಗಳು ಸುಳ್ಳೆಂದು ತಿಳಿದಿರುವ ಯಾವುದೇ ವಿವರಣೆ, ದಾಖಲೆ ಅಥವಾ ಮಾಹಿತಿಯನ್ನು ನೀಡುವ, ಹಾಜರುಪಡಿಸುವ, ಒದಗಿಸುವ ಅಥವಾ ತಿಳಿದೂ ತಿಳಿದೂ ಹಾಗೆ ಮಾಡಲು, ಹಾಜರುಪಡಿಸಲು ಅಥವಾ ಒದಗಿಸಲು ಅನುಮತಿಸುವ ಯಾರೇ ವ್ಯಕ್ತಿಯನ್ನು, ಅಪರಾಧ ನಿರ್ಣಯವಾದ ಮೇಲೆ, ಮೊದಲನೆಯ ಅಪರಾಧಕ್ಕಾಗಿ ಎರಡು ನೂರಾ ಐವತ್ತು ರೂಪಾಯಿವರೆಗಿನ ಜುಲ್ಮಾನೆಯಿಂದ ಮತ್ತು ತರುವಾಯದ ಅಪರಾಧಕ್ಕಾಗಿ ಒಂದು ಸಾವಿರ ರೂಪಾಯಿವರೆಗಿನ ಜುಲ್ಮಾನೆಯಿಂದ ಅಥವಾ ಆರು ತಿಂಗಳವರೆಗಿನ ಕಾರಾವಾಸದಿಂದ ಅಥವಾ ಅವೆರಡರಿಂದಲೂ ದಂಡಿಸತಕ್ಕದ್ದು.

(12) (i) ಈ ಪ್ರಕರಣದ ಅಡಿಯಲ್ಲಿ ಒಂದು ಅಪರಾಧವನ್ನು ಮಾಡಿದ ವ್ಯಕ್ತಿಯು, ಒಂದು ಕಂಪನಿಯಾಗಿದ್ದಲ್ಲಿ, ಆ ಕಂಪನಿಯನ್ನು ಹಾಗೂ ಅಪರಾಧವು ನಡೆದ ಸಮಯದಲ್ಲಿ ವ್ಯವಹಾರವನ್ನು ನಡೆಸಲು ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ದಂಡಿತನಾಗತಕ್ಕದ್ದು:

ಪರಂತು, ಆ ಅಪರಾಧವು ತನಗೆ ತಿಳಿಯದೆ ನಡೆಯಿತೆಂದು ಅಥವಾ ಆ ಅಪರಾಧವು ನಡೆಯುವುದನ್ನು ತಡೆಯಲು ತಾನು ಎಲ್ಲಾ ಯುಕ್ತ ಶ್ರದ್ಧೆಯನ್ನು ವಹಿಸಿದ್ದೆನೆಂದು ರುಜುವಾತುಪಡಿಸಿದರೆ ಈ ಉಪ ಪ್ರಕರಣದಲ್ಲಿರುವುದು ಯಾವುದೂ, ಅಂಥ ವ್ಯಕ್ತಿಯನ್ನು ಯಾವುದೇ ಶಿಕ್ಷೆಗೆ ಗುರಿಪಡಿಸತಕ್ಕದ್ದಲ್ಲ.

(ii) (i)ನೇ ಖಂಡದಲ್ಲಿ ಏನೇ ಇದ್ದರೂ, ಈ ಪ್ರಕರಣದ ಅಡಿಯಲ್ಲಿನ ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾರೆ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಅಪರಾಧ ನಡೆದಿರುವುದನ್ನು ಕಂಪನಿಯ ಯಾರೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ನಿರ್ಲಕ್ಷ್ಯಕ್ಕೆ ಆರೋಪಿಸಬಹುದೆಂದು ರುಜುವಾತಾದರೆ ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಅಪರಾಧದ

ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಮತ್ತು ಅವರು ತಮ್ಮ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತರಾಗತಕ್ಕದ್ದು.

**ವಿವರಣೆ.–** ಈ ಉಪ ಪ್ರಕರಣದ ಉದ್ದೇಶಗಳಿಗಾಗಿ, –

(ಎ) "ಕಂಪನಿ" ಎಂದರೆ ಯಾವುದೇ ನಿಗಮಿತ ನಿಕಾಯ ಮತ್ತು ಅದು ಫರ್ಮು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಪಟ್ಟಂತೆ "ನಿರ್ದೇಶಕ" ಎಂದರೆ ಫರ್ಮಿನ ಒಬ್ಬ ಪಾಲುದಾರ.

## ಭಾಗ–VI

## ತರಬೇತಿ ಸಂಸ್ಥೆಗಳು

**23. ತರಬೇತಿ ಸಂಸ್ಥೆಗಳು.–** (1) ಪರಿಷತ್ತು ತನ್ನ ಪ್ರತಿನಿಧಿಗಳ ಮೂಲಕ ಪರಿಶೀಲನೆ ನಡೆಸಿದ ತರುವಾಯ ಅನುಮೋದಿತವಾದ ಮತ್ತು ಮನ್ನಣೆ ಪಡೆದ ಸಂಸ್ಥೆಗಳು ದಾದಿಯರು, ಸೂಲಗಿತ್ತಿಯರು, ಸಹಾಯಕ ದಾದಿ–ಸೂಲಗಿತ್ತಿಯರು ಅಥವಾ ಆರೋಗ್ಯ ಸಂದರ್ಶಕರಿಗೆ ತರಬೇತಿ ನೀಡಲು ಮತ್ತು ಪರಿಷತ್ತಿನ ಅರ್ಹತಾ ಪ್ರಮಾಣಪತ್ರಕ್ಕಾಗಿ ಅವರನ್ನು ಪರೀಕ್ಷೆಗೆ ಕಳುಹಿಸಲು ಸಕ್ಷಮವಾಗಿರತಕ್ಕದ್ದು.

(2) ಪರಿಷತ್ತು, ತನ್ನ ಪ್ರತಿನಿಧಿಗಳ ಮೂಲಕ ಪರಿಶೀಲನೆ ನಡೆಸಿದ ತರುವಾಯ ಯಾವುದೇ ಅಂಥ ಸಂಸ್ಥೆಗೆ ನೀಡಿದ ಮನ್ನಣೆಯನ್ನು ಹಿಂತೆಗೆದುಕೊಳ್ಳಬಹುದು. ಹಾಗೆ ಹಿಂತೆಗೆದುಕೊಳ್ಳುವ ಆದೇಶವು ಲಿಖಿತದಲ್ಲಿರತಕ್ಕದ್ದು ಮತ್ತು ನಿಯಮಿಸಲಾದ ರೀತಿಯಲ್ಲಿ ಅದನ್ನು ಜಾರಿಗೊಳಿಸತಕ್ಕದ್ದು.

(3) ಈ ಪ್ರಕರಣದ ಮೇರೆಗೆ ಅನುಮೋದಿತವಾಗಿಲ್ಲದ ಮತ್ತು ಮನ್ನಣೆ ಪಡೆದಿಲ್ಲದ ಯಾವುದೇ ಶಾಲೆ, ಆಸ್ಪತ್ರೆ ಅಥವಾ ಇತರ ಸಂಸ್ಥೆಯು, ಯಾರೇ ವ್ಯಕ್ತಿಗೆ, ಈ ಅಧಿನಿಯಮದ ಅಡಿಯಲ್ಲಿ ಆತನ ಹೆಸರು ಪಟ್ಟಿಯಲ್ಲಿ ನೋಂದಾಯಿತವಾಗಿದ್ದ ಹೊರತು ಅಥವಾ ಪಟ್ಟಿಯಲ್ಲಿ ನಮೂದಾಗಿದ್ದ ಹೊರತು ಒಬ್ಬ ದಾದಿ, ಸೂಲಗಿತ್ತಿ, ಸಹಾಯಕ ದಾದಿ–ಸೂಲಗಿತ್ತಿ ಅಥವಾ ಆರೋಗ್ಯ ಸಂದರ್ಶಕನಾಗಿ ಯಾವುದೇ ಪರೀಕ್ಷೆಯಲ್ಲಿ ಉತ್ತೀರ್ಣನಾಗುವುದಕ್ಕಾಗಿ ಅಥವಾ ವೃತ್ತಿ ಮಾಡಲು ತರಬೇತಿಯ ಯಾವುದೇ ಪಠ್ಯಕ್ರಮದಲ್ಲಿ ತರಬೇತಿ ಹೊಂದಿರುವ ಕಾರಣದಿಂದಾಗಿ ಅರ್ಹತೆ ಹೊಂದಿರುವವನೆಂದು ತಾತ್ಪರ್ಯವಾಗುವ ಯಾವುದೇ ಪ್ರಮಾಣಪತ್ರ ನೀಡತಕ್ಕದ್ದಲ್ಲ ಅಥವಾ ಯಾವುದೇ ದಸ್ತಾವೇಜಿನಲ್ಲಿ ಅವನ ಹೆಸರನ್ನು ನಮೂದಿಸತಕ್ಕದ್ದಲ್ಲ.

(4) (3)ನೇ ಉಪ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯನ್ನು, ಅಪರಾಧ ನಿರ್ಣಯವಾದ ಮೇಲೆ, ಮೂರು ನೂರು ರೂಪಾಯಿಯವರೆಗಿನ ಜುಲ್ಮಾನೆಯಿಂದ ದಂಡಿಸತಕ್ಕದ್ದು.

(5) (i) ಈ ಪ್ರಕರಣದ ಅಡಿಯಲ್ಲಿ ಒಂದು ಅಪರಾಧವನ್ನು ಮಾಡುವ ವ್ಯಕ್ತಿಯು ಒಂದು ಕಂಪನಿಯಾಗಿದ್ದಲ್ಲಿ, ಆ ಅಪರಾಧವು ನಡೆದ ಸಮಯದಲ್ಲಿ ಅದರ ವ್ಯವಹಾರವನ್ನು ನಡೆಸಲು ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಕಂಪನಿಯನ್ನು ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವನು ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗಲು ಬದ್ಧನಾಗಿರತಕ್ಕದ್ದು ಮತ್ತು ದಂಡಿತನಾಗತಕ್ಕದ್ದು:

ಪರಂತು, ಈ ಉಪ ಪ್ರಕರಣದಲ್ಲಿ ಏನೇ ಇದ್ದರೂ, ಅಂಥ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಗಟ್ಟಲು ತಾನು ಎಲ್ಲಾ ಯುಕ್ತ ಜಾಗರೂಕತೆಯನ್ನು ವಹಿಸಿದ್ದೆನೆಂದು ರುಜುವಾತುಪಡಿಸಿದರೆ ಅವನು ಯಾವುದೇ ದಂಡನೆಗೆ ಗುರಿಯಾಗತಕ್ಕದ್ದಲ್ಲ.

(ii) (i)ನೇ ಖಂಡದಲ್ಲಿ ಏನೇ ಇದ್ದರೂ, ಈ ಪ್ರಕರಣದ ಅಡಿಯಲ್ಲಿನ ಒಂದು ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ರುಜುವಾತಾದರೆ ಅಥವಾ ಅದನ್ನು ಅವನ ನಿರ್ಲಕ್ಷತೆಗೆ ಆರೋಪಿಸಬಹುದಾದರೆ ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವನು ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ದಂಡಿತನಾಗತಕ್ಕದ್ದು.

**ವಿವರಣೆ:–** ಈ ಉಪ ಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಕಂಪನಿ" ಎಂದರೆ ಯಾವುದೇ ನಿಗಮಿತ ನಿಕಾಯ ಮತ್ತು ಅದು ಒಂದು ಫರ್ಮು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಒಂದು ಫರ್ಮಿಗೆ ಸಂಬಂಧಪಟ್ಟಂತೆ "ನಿರ್ದೇಶಕ" ಎಂದರೆ ಫರ್ಮಿನ ಒಬ್ಬ ಪಾಲುದಾರ.

**24. ಸಂಸ್ಥೆಗಳಿಗೆ ಮನ್ನಣೆ ನೀಡಲು ನಿರಾಕರಿಸುವುದರ ವಿರುದ್ಧ ಅಪೀಲು.–** ದಾದಿಯರು, ಸೂಲಗಿತ್ತಿಯರು, ಸಹಾಯಕ ದಾದಿ– ಸೂಲಗಿತ್ತಿಯರು ಅಥವಾ ಆರೋಗ್ಯ ಸಂದರ್ಶಕರಿಗೆ ತರಬೇತಿ ನೀಡಲು ಸಕ್ಷಮವಾಗಿದೆಯೆಂದು ಯಾವುದೇ ಸಂಸ್ಥೆಯನ್ನು ಅನುಮೋದಿಸಲು ಮತ್ತು ಮನ್ನಣೆ ನೀಡಲು ಪರಿಷತ್ತು ನಿರಾಕರಿಸಿದುದರಿಂದ ಬಾಧಿತನಾದ ಯಾರೇ ವ್ಯಕ್ತಿಯು ಅಂಥ ನಿರಾಕರಣೆಯ ದಿನಾಂಕದಿಂದ ತೊಂಬತ್ತು ದಿನಗಳೊಳಗಾಗಿ, ಅಂಥ ನಿರಾಕರಣೆಯ ಆದೇಶದ

ವಿರುದ್ಧ ರಾಜ್ಯ ಸರ್ಕಾರಕ್ಕೆ ಅಪೀಲನ್ನು ಸಲ್ಲಿಸಬಹುದು ಮತ್ತು ಅಂಥ ಅಪೀಲಿನ ಮೇಲೆ ರಾಜ್ಯ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು.

## ಭಾಗ-VII
## ಸಂಕೀರ್ಣ

**25. ಮರಣದ ಬಗ್ಗೆ ನೋಟೀಸನ್ನು ಕೊಟ್ಟ ಮೇಲೆ ನೋಂದಣಿ ಪುಸ್ತಕದಿಂದ ಹೆಸರುಗಳನ್ನು ತೆಗೆದುಹಾಕುವುದು.–** ಯಾವುದೇ ನೋಂದಣಿ ಪುಸ್ತಕದಲ್ಲಿ ಯಾರೇ ವ್ಯಕ್ತಿಯ ಹೆಸರು ನಮೂದಾಗಿದೆಯೆಂದು ತಿಳಿದಿರುವ ಮತ್ತು ನಂಬಲು ಕಾರಣವಿರುವ ಪ್ರತಿಯೊಬ್ಬ ಜನನ – ಮರಣ ರಿಜಿಸ್ಟ್ರಾರನು, ಆ ಯಾರೇ ವ್ಯಕ್ತಿಯ ಮರಣದ ಬಗ್ಗೆ ನೋಟೀಸನ್ನು ಸ್ವೀಕರಿಸಿದ ತರುವಾಯ ತಾನು ಸಹಿ ಮಾಡಿರುವ ಮತ್ತು ಮರಣದ ಕಾಲ ಮತ್ತು ಸ್ಥಳವನ್ನು ಸೂಚಿಸುವ ಅಂಥ ಮರಣದ ನೋಂದಣಿಯ ಒಂದು ಪ್ರಮಾಣಪತ್ರವನ್ನು ಪರಿಷತ್ತಿಗೆ ಅಂಚೆಯ ಮೂಲಕ ಕೂಡಲೇ ಕಳುಹಿಸತಕ್ಕದ್ದು. ತದನಂತರ ಅಂಥ ವ್ಯಕ್ತಿಯ ಹೆಸರನ್ನು ನೋಂದಣಿ ಪುಸ್ತಕದಿಂದ ತೆಗೆದುಹಾಕತಕ್ಕದ್ದು.

**26. ಪ್ರಮಾಣಪತ್ರವನ್ನು ಅಪ್ರಾಮಾಣಿಕವಾಗಿ ಬಳಸಿದ್ದಕ್ಕಾಗಿ ದಂಡ.–** (ಎ) ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ತನಗೆ ಅಥವಾ ಯಾರೇ ಇತರ ವ್ಯಕ್ತಿಗೆ ನೀಡಿರುವ ಯಾವುದೇ ನೋಂದಣಿ ಪ್ರಮಾಣ ಪತ್ರವನ್ನು ಅಪ್ರಮಾಣಿಕವಾಗಿ ಬಳಸಿಕೊಳ್ಳುವ;

(ಬಿ) ಲಿಖಿತದಲ್ಲಾಗಲಿ ಅಥವಾ ಇತರ ರೀತಿಯಲ್ಲಾಗಲೀ ಯಾವುದೇ ಸುಳ್ಳು ಅಥವಾ ಮೋಸದ ಘೋಷಣೆ, ಪ್ರಮಾಣ ಪತ್ರ ಅಥವಾ ನಿರೂಪಣೆಯನ್ನು ಮಾಡಿ ಅಥವಾ ಹಾಜರುಪಡಿಸಿ ಅಥವಾ ಮಾಡುವಂತೆ ಅಥವಾ ಹಾಜರುಪಡಿಸುವಂತೆ ಮಾಡಿ ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ನೋಂದಣಿಯನ್ನು ಪಡೆಯುವ ಅಥವಾ ಪಡೆಯಲು ಪ್ರಯತ್ನಿಸುವ; ಅಥವಾ

(ಸಿ) ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ನೀಡಲಾದ ನೋಂದಣಿ ಪುಸ್ತಕ ಅಥವಾ ಪ್ರಮಾಣ ಪತ್ರಕ್ಕೆ ಸಂಬಂಧಪಟ್ಟ ಯಾವುದೇ ವಿಷಯದಲ್ಲಿ ಯಾವುದೇ ಸುಳ್ಳು ನಿರೂಪಣೆಯನ್ನು ಉದ್ದೇಶಪೂರ್ವಕವಾಗಿ ಮಾಡುವ ಅಥವಾ ಮಾಡಿಸುವ

– ಯಾರೇ ವ್ಯಕ್ತಿಯನ್ನು ಅಪರಾಧ ನಿರ್ಣಯವಾದ ಮೇಲೆ, ಮೊದಲನೆಯ ಅಪರಾಧಕ್ಕಾಗಿ ಎರಡು ನೂರಾ ಐವತ್ತು ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಮತ್ತು ತರುವಾಯದ ಯಾವುದೇ ಅಪರಾಧಕ್ಕಾಗಿ ಐದು ನೂರು ರೂಪಾಯಿಯವರೆಗಿನ ಜುಲ್ಮಾನೆಯಿಂದ ಅಥವಾ ಆರು ತಿಂಗಳವರೆಗಿನ ಸಾದಾ ಕಾರಾವಾಸದಿಂದ ಅಥವಾ ಅವೆರಡರಿಂದಲೂ ದಂಡಿಸತಕ್ಕದ್ದು.

**27. ನೋಂದಾಯಿತ ದಾದಿ, ಸೂಲಗಿತ್ತಿ, ಸಹಾಯಕ ದಾದಿ–ಸೂಲಗಿತ್ತಿ ಅಥವಾ ಆರೋಗ್ಯ ಸಂದರ್ಶಕರ ಪದವಿಯನ್ನು ಕಾನೂನು ಬಾಹಿರವಾಗಿ ಹೊಂದಿರುವುದಕ್ಕಾಗಿ ದಂಡ.–** ನೋಂದಾಯಿತ ದಾದಿ, ಸೂಲಗಿತ್ತಿ, ಸಹಾಯಕ ದಾದಿ – ಸೂಲಗಿತ್ತಿ ಅಥವಾ ಆರೋಗ್ಯ ಸಂದರ್ಶಕನಾಗಿಲ್ಲದ ಯಾರೇ ವ್ಯಕ್ತಿಯು, ನೋಂದಾಯಿತ ದಾದಿ, ಸೂಲಗಿತ್ತಿ, ಸಹಾಯಕ ದಾದಿ–ಸೂಲಗಿತ್ತಿ ಅಥವಾ ಆರೋಗ್ಯ ಸಂದರ್ಶಕನ ಹೆಸರನ್ನು ಅಥವಾ ಪದವಿಯನ್ನು ತೆಗೆದುಕೊಂಡರೆ ಅಥವಾ ಬಳಸಿದರೆ ಅಥವಾ ಅಂಥ ವ್ಯಕ್ತಿಯು ಒಬ್ಬ ನೋಂದಾಯಿತ ದಾದಿ, ಸೂಲಗಿತ್ತಿ, ಸಹಾಯಕ ದಾದಿ – ಸೂಲಗಿತ್ತಿ ಅಥವಾ ಆರೋಗ್ಯ ಸಂದರ್ಶಕನೆಂದು ನಂಬಬಹುದೆಂಬ ಅಥವಾ ನಂಬುವ ಸಂಭವವಿದೆಯೆಂಬ ತಿಳಿವಳಿಕೆಯಿಂದ, ಯಾವುದೇ ಹೆಸರು, ಪದವಿ, ವಿವರಣೆ, ನಿಯಮಿಸಲಾದ ಸಮವಸ್ತ್ರ, ವಸ್ತು ಅಥವಾ ನಾಮ ಫಲಕವನ್ನು ಬಳಸಿದರೆ, ಆ ವ್ಯಕ್ತಿಯನ್ನು ಅಪರಾಧ ನಿರ್ಣಯವಾದ ಮೇಲೆ, ಮೊದಲನೆಯ ಅಪರಾಧಕ್ಕಾಗಿ ಒಂದು ನೂರು ರೂಪಾಯಿಯವರೆಗಿನ ಜುಲ್ಮಾನೆಯಿಂದ ಮತ್ತು ತರುವಾಯದ ಯಾವುದೇ ಅಪರಾಧಕ್ಕಾಗಿ ಎರಡು ನೂರು ರೂಪಾಯಿಯವರೆಗಿನ ಜುಲ್ಮಾನೆಯಿಂದ ಅಥವಾ ಮೂರು ತಿಂಗಳವರೆಗಿನ ಸಾದಾ ಕಾರಾವಾಸದಿಂದ ಅಥವಾ ಅವೆರಡರಿಂದಲೂ ದಂಡಿಸತಕ್ಕದ್ದು.

**28. ಈ ಅಧಿನಿಯಮದ ಅಡಿಯಲ್ಲಿನ ಅಪರಾಧಗಳ ಅಧಿವಿಚಾರಣೆಗಾಗಿ ಸಕ್ಷಮವಾಗಿರುವ ನ್ಯಾಯಾಲಯ. –** ಮೊದಲನೇ ದರ್ಜೆಯ ಒಬ್ಬ ಮ್ಯಾಜಿಸ್ಟ್ರೇಟನ ನ್ಯಾಯಾಲಯದ ಹೊರತು ಯಾವುದೇ ಇತರ ನ್ಯಾಯಾಲಯವು ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ ಅಥವಾ ಅದರ ಅಧಿವಿಚಾರಣೆ ಮಾಡತಕ್ಕದ್ದಲ್ಲ.

**29. ರಾಜ್ಯ ಸರ್ಕಾರದ ನಿಯಮ ರಚನಾಧಿಕಾರ.–**(1) ರಾಜ್ಯ ಸರ್ಕಾರವು, ಪೂರ್ವ ಪ್ರಕಟಣೆಯ ತರುವಾಯ, ಅಧಿಸೂಚನೆ ಹೊರಡಿಸಿ, ಈ ಅಧಿನಿಯಮದ ಎಲ್ಲಾ ಅಥವಾ ಅವುಗಳ ಪೈಕಿ ಯಾವುವೇ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಈ ಮುಂದಿನ ವಿಷಯಗಳ ಬಗ್ಗೆ ನಿಯಮಗಳನ್ನು ರಚಿಸಬಹುದು, ಎಂದರೆ:–

(ಎ) ಪರಿಷತ್ತಿನ ಸದಸ್ಯರ ಚುನಾವಣೆಗಳನ್ನು ಮತ್ತು ನಾಮನಿರ್ದೇಶನಗಳನ್ನು ಮತ್ತು ಅಧ್ಯಕ್ಷನ ಹಾಗೂ ಉಪಾಧ್ಯಕ್ಷನ ಚುನಾವಣೆಗಳನ್ನು ಮಾಡತಕ್ಕ ರೀತಿಯನ್ನು ಮತ್ತು 6ನೇ ಪ್ರಕರಣದ ಅಡಿಯಲ್ಲಿ ಸಾಂದರ್ಭಿಕ ಖಾಲಿ ಸ್ಥಾನವನ್ನು ತುಂಬತಕ್ಕ ರೀತಿಯನ್ನು ನಿಯಮಿಸುವುದು;

(ಬಿ) ನೋಂದಣಿ ಪುಸ್ತಕವನ್ನು ನಿರ್ವಹಿಸತಕ್ಕ ನಮೂನೆಯನ್ನು ಅಂಥ ನೋಂದಣಿ ಪುಸ್ತಕದಲ್ಲಿ ನಮೂದಿಸಬೇಕಾದ ವಿವರಗಳನ್ನು ಮತ್ತು 12 ನೇ ಪ್ರಕರಣದ ಅಡಿಯಲ್ಲಿ ಅಂಥ ನೋಂದಣಿ ಪುಸ್ತಕವನ್ನು ಎಷ್ಟು ಭಾಗಗಳಾಗಿ ವಿಭಾಗಿಸತಕ್ಕದ್ದು ಎಂಬುದನ್ನು ನಿಯಮಿಸುವುದು;

(ಸಿ) ಒಬ್ಬ ವ್ಯಕ್ತಿಯನ್ನು ನೋಂದಣಿಗಾಗಿ ಹಕ್ಕುಳ್ಳವನಾಗಿಸುವ ತರಬೇತಿ ಪಠ್ಯಕ್ರಮಗಳು ಮತ್ತು ಪರೀಕ್ಷೆಗಳೂ ಸೇರಿದಂತೆ ಸಹಾಯಕ ದಾದಿ–ಸೂಲಗಿತ್ತಿಯರ ತರಬೇತಿ ಪಠ್ಯಕ್ರಮಗಳನ್ನು ಮತ್ತು ಪರೀಕ್ಷೆಗಳನ್ನು, ನೋಂದಣಿಗಾಗಿ ಅರ್ಜಿಯೊಂದಿಗೆ ಸಂದಾಯವಾಗಬೇಕಾದ ಫೀಜು, ಅಂಥ ಅರ್ಜಿಗಳನ್ನು ಸಲ್ಲಿಸತಕ್ಕ ನಮೂನೆ, ಮತ್ತು 13 ನೇ ಪ್ರಕರಣದ ಅಡಿಯಲ್ಲಿ ನೋಂದಣಿ ಪುಸ್ತಕದಲ್ಲಿ ಯಾವ ಷರತ್ತುಗಳಿಗೆ ಒಳಪಟ್ಟು ಹೆಸರುಗಳನ್ನು ನಮೂದಿಸತಕ್ಕದ್ದೋ ಆ ಷರತ್ತುಗಳು – ಇವುಗಳನ್ನು ನಿಯಮಿಸುವುದು;

(ಡಿ) 14ನೇ ಪ್ರಕರಣದ ಅಡಿಯಲ್ಲಿ ನೋಂದಣಿ ಪುಸ್ತಕದಿಂದ ದಾದಿಯರು, ಸೂಲಗಿತ್ತಿಯರು, ಸಹಾಯಕ ದಾದಿ – ಸೂಲಗಿತ್ತಿಯರು ಮತ್ತು ಆರೋಗ್ಯ ಸಂದರ್ಶಕರ ಹೆಸರುಗಳನ್ನು ಯಾವ ಕಾರಣಕ್ಕಾಗಿ ಯಾವ ಷರತ್ತುಗಳ ಮೇರೆಗೆ ಮತ್ತು ಯಾವ ರೀತಿಯಲ್ಲಿ ತೆಗೆದುಹಾಕಬಹುದು, ಅಥವಾ ಇದರಲ್ಲಿ ಪುನರ್ ನಮೂದಿಸಬಹುದು ಎಂಬುದನ್ನು ಮತ್ತು ತೆಗೆದುಹಾಕುವ ಅಥವಾ ನಿರಾಕರಿಸುವ ಆದೇಶವನ್ನು ಅಂಥ ವ್ಯಕ್ತಿಗಳಿಗೆ ಜಾರಿ ಮಾಡತಕ್ಕ ರೀತಿ – ಇವುಗಳನ್ನು ನಿಯಮಿಸುವುದು;

(ಇ) 19ನೆಯ ಪ್ರಕರಣದ ಉದ್ದೇಶಕ್ಕಾಗಿ ಒಬ್ಬ ದಾದಿ, ಸೂಲಗಿತ್ತಿ, ಸಹಾಯಕ ದಾದಿ–ಸೂಲಗಿತ್ತಿ ಮತ್ತು ಆರೋಗ್ಯ ಸಂದರ್ಶಕನಾಗಿ ಒಬ್ಬ ವ್ಯಕ್ತಿಯು ಪಡೆಯಲು ಅಗತ್ಯವಿರುವ ತರಬೇತಿ ಪಠ್ಯಕ್ರಮ ಮತ್ತು ತರಬೇತಿ ನೀಡುವ ರೀತಿ – ಇವುಗಳನ್ನು ನಿಯಮಿಸುವುದು;

(ಎಫ್) ಲೈಸೆನ್ಸು ನೀಡಿಕೆ ಪ್ರಾಧಿಕಾರವು 20ನೇ ಪ್ರಕರಣದ ಅಡಿಯಲ್ಲಿ ತನ್ನ ಅಧಿಕಾರ ವ್ಯಾಪ್ತಿಯೊಳಗೆ ಬರುವ ಪ್ರದೇಶದಲ್ಲಿ ವೃತ್ತಿ ನಡೆಸುವ ದಾದಿಯರು, ಸೂಲಗಿತ್ತಿಯರು, ಸಹಾಯಕ ದಾದಿ – ಸೂಲಗಿತ್ತಿಯರು ಅಥವಾ ಆರೋಗ್ಯ ಸಂದರ್ಶಕರ ಮೇಲೆ ಯಾವ ವಿಷಯಗಳ ಬಗ್ಗೆ, ಯಾವ ರೀತಿಯಲ್ಲಿ ಮತ್ತು ಯಾವ ಷರತ್ತುಗಳಿಗೆ ಒಳಪಟ್ಟು ಮೇಲ್ವಿಚಾರಣೆ ಮತ್ತು ನಿಯಂತ್ರಣ ಚಲಾಯಿಸತಕ್ಕದ್ದು ಎಂಬುದನ್ನು ನಿಯಮಿಸುವುದು;

(ಜಿ) 22ನೆಯ ಪ್ರಕರಣದ ಅಡಿಯಲ್ಲಿ ದಾದಿಯರ ಯಾವುದೇ ಕಾರ್ಯಸಂಸ್ಥೆ ಲೈಸೆನ್ಸಿಗಾಗಿ ಯಾವ ದಿನಾಂಕಕ್ಕೆ ಮೊದಲು ಮತ್ತು ಯಾವ ರೀತಿ ಮತ್ತು ನಮೂನೆಯಲ್ಲಿ ಅರ್ಜಿ ಸಲ್ಲಿಸತಕ್ಕದ್ದು ಎಂಬುದನ್ನು ನಿಯಮಿಸುವುದು;

(ಎಚ್) 23ನೆಯ ಪ್ರಕರಣದ ಅಡಿಯಲ್ಲಿ ಒಂದು ಸಂಸ್ಥೆಗೆ ನೀಡಿದ ಮನ್ನಣೆಯನ್ನು ಹಿಂತೆಗೆದುಕೊಳ್ಳುವ ಆದೇಶವನ್ನು ಯಾವ ರೀತಿಯಲ್ಲಿ ಜಾರಿ ಮಾಡತಕ್ಕದ್ದು ಎಂಬುದನ್ನು ನಿಯಮಿಸುವುದು;

(ಐ) 17ನೇ ಪ್ರಕರಣದ (2)ನೇ ಉಪ ಪ್ರಕರಣದ, ಅಡಿಯಲ್ಲಿ ಪಟ್ಟಿಯಲ್ಲಿ ಯಾರೇ ವ್ಯಕ್ತಿಯ ಹೆಸರನ್ನು ನಮೂದಿಸಲು ಮತ್ತು 15 ಅಥವಾ 24ನೇ ಪ್ರಕರಣದ ಅಡಿಯಲ್ಲಿ ಒಂದು ಅಪೀಲಿನ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ಫೀಜನ್ನು ನಿಯಮಿಸುವುದು; ಮತ್ತು

(ಜೆ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ವಿಷಯ.

(3) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಎರಡು ಅನುಕ್ರಮ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಅದನ್ನು ಹಾಗೆ ಇಡಲಾದ ಅಧಿವೇಶನ ಅಥವಾ ಅದರ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸಕೂಡದೆಂದೂ ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**30. ಉಪ ವಿಧಿಗಳನ್ನು ರಚಿಸಲು ಪರಿಷತ್ತಿನ ಅಧಿಕಾರ.** – (1) ಪರಿಷತ್ತು ಈ ಮುಂದಿನ ವಿಷಯಗಳಿಗಾಗಿ ಈ ಅಧಿನಿಯಮ ಅಥವಾ ನಿಯಮಗಳಿಗೆ ಅಸಂಗತವಲ್ಲದ ಉಪ ವಿಧಿಗಳನ್ನು ರಚಿಸಬಹುದು, ಎಂದರೆ:–

(ಎ) ನೋಂದಣಿ ಪುಸ್ತಕ ಅಥವಾ ಪಟ್ಟಿಯ ಸಂಕಲನ, ನಿರ್ವಹಣೆ ಮತ್ತು ಪ್ರಕಟಣೆ ಮತ್ತು ನೋಂದಣಿ ಪುಸ್ತಕದಲ್ಲಿ ಅಥವಾ ಪಟ್ಟಿಯಲ್ಲಿ ಸೇರಿಸಲು ಷರತ್ತುಗಳನ್ನು ವಿನಿಯಮಿಸುವುದು;

(ಬಿ) ನೋಂದಣಿ ಪುಸ್ತಕದಲ್ಲಿ ಸೇರಿಸಲು ಒಂದು ಷರತ್ತಾಗಿ ನಿಯಮಿಸಬಹುದಾದ ಯಾವುವೇ ಪರೀಕ್ಷೆಗಳನ್ನು ನಡೆಸುವುದನ್ನು ಮತ್ತು ಅಂಥ ಪರೀಕ್ಷೆಗಳಿಗೆ ಹಾಜರಾಗುವ ಅಭ್ಯರ್ಥಿಗಳು ಪಡೆಯತಕ್ಕ ತರಬೇತಿ,

ಪಠ್ಯಕ್ರಮಗಳೂ ಸೇರಿದಂತೆ, ಅಂಥ ಪರೀಕ್ಷೆಗಳಿಗೆ ಪೂರಕವಾದ ಅಥವಾ ಅವುಗಳಿಗೆ ಸಂಬಂಧಪಟ್ಟ ಯಾವುದೇ ವಿಷಯವನ್ನು ವಿನಿಯಮಿಸುವುದು;

(ಸಿ) ಪಟ್ಟಿಯನ್ನು ನಿರ್ವಹಿಸತಕ್ಕ ರೀತಿ, ಪಟ್ಟಿಯಲ್ಲಿ ಹೆಸರುಗಳನ್ನು ನಮೂದಿಸಿಕೊಳ್ಳಬೇಕಾದ ವ್ಯಕ್ತಿಗಳು, ಪೂರೈಸತಕ್ಕ ಷರತ್ತುಗಳು, ಪಟ್ಟಿಯಲ್ಲಿ ಯಾವ ವ್ಯಕ್ತಿಗಳ ಹೆಸರುಗಳನ್ನು ನಮೂದಿಸಲಾಗಿದೆಯೋ ಆ ವ್ಯಕ್ತಿಗಳು ಉತ್ತೀರ್ಣರಾಗಬೇಕಾದ ಅರ್ಹತಾ ಪರೀಕ್ಷೆಗಳು–ಇವುಗಳನ್ನು ನಿರ್ಧರಿಸುವುದು ಮತ್ತು ಅಂಥ ಪರೀಕ್ಷೆಗಳನ್ನು ನಡೆಸುವುದನ್ನು ವಿನಿಯಮಿಸುವುದು;

(ಡಿ) ಅಂಥ ತರಬೇತಿಯ ಉದ್ದೇಶಕ್ಕಾಗಿ ಯಾವುದೇ ಸಂಸ್ಥೆಗೆ ಅನುಮೋದನೆ ನೀಡುವುದು ಮತ್ತು ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಅಭ್ಯರ್ಥಿಗಳಿಗೆ ಡಿಪ್ಲೊಮಾಗಳನ್ನು ನೀಡುವುದು;

(ಇ) ರೋಗಿಗಳ ಶುಶ್ರೂಷಾ, ಪ್ರಸೂತಿ ಅಥವಾ ಶಿಶು ಕಲ್ಯಾಣ ಸಂಸ್ಥೆಗಳನ್ನು ಪರಿಷತ್ತಿಗೆ ಸಂಯೋಜನೆಗೊಳಿಸಬಹುದಾದ ಷರತ್ತುಗಳನ್ನು ವಿನಿಯಮಿಸುವುದು;

(ಎಫ್) ರಿಜಿಸ್ಟ್ರಾರನನ್ನು ಮತ್ತು ಅವಶ್ಯವಾಗಬಹುದಾದಂಥ ಇತರ ನೌಕರರನ್ನು ನೇಮಿಸುವುದು;

(ಜಿ) (ಎಫ್) ಖಂಡದ ಅಡಿಯಲ್ಲಿ ನೇಮಕಗೊಂಡ ವ್ಯಕ್ತಿಗಳ ವೇತನ, ಪಿಂಚಣಿ, ನಡತೆ ಮತ್ತು ಇತರ ಸೇವಾ ಷರತ್ತುಗಳನ್ನು ವಿನಿಯಮಿಸುವುದು;

(ಎಚ್) ಪರಿಷತ್ತಿನ ಮತ್ತು ಸಂಯೋಜಿತ ಸಂಸ್ಥೆಗಳ ನೌಕರರ ಪ್ರಯೋಜನಕ್ಕಾಗಿ ಭವಿಷ್ಯ ನಿಧಿಯನ್ನು ಸ್ಥಾಪಿಸುವುದು ಮತ್ತು ಅದರ ಆಡಳಿತವನ್ನು ವಿನಿಯಮಿಸುವುದು;

(ಐ) ನೋಂದಾಯಿತ ದಾದಿಯರು, ಸೂಲಗಿತ್ತಿಯರು, ಸಹಾಯಕ ದಾದಿ – ಸೂಲಗಿತ್ತಿಯರು ಮತ್ತು ಆರೋಗ್ಯ ಸಂದರ್ಶಕರು ಮತ್ತು ಪಟ್ಟಿಯಲ್ಲಿ ಹೆಸರು ನಮೂದಾಗಿರುವ ವ್ಯಕ್ತಿಗಳು ತಮ್ಮ ವೃತ್ತಿ ನಡೆಸುವುದನ್ನು ವಿನಿಯಮಿಸುವುದು ಮತ್ತು ಮೇಲ್ವಿಚಾರಣೆ ನಡೆಸುವುದು;

(ಜೆ) ನೋಂದಾಯಿತ ದಾದಿಯರು, ಸೂಲಗಿತ್ತಿಯರು, ಸಹಾಯಕ ದಾದಿ – ಸೂಲಗಿತ್ತಿಯರು ಮತ್ತು ಆರೋಗ್ಯ ಸಂದರ್ಶಕರು ಮತ್ತು ಪಟ್ಟಿಯಲ್ಲಿ ಹೆಸರು ನಮೂದಾಗಿರುವ ವ್ಯಕ್ತಿಗಳ ಹೆಸರುಗಳನ್ನು ಮತ್ತು ಅವರ ಮನೆಯ ವಿಳಾಸದ ಪ್ರಕಟಣೆಯನ್ನು ವಿನಿಯಮಿಸುವುದು;

(ಕೆ) ಪರಿಷತ್ತಿನ ನೋಂದಣಿ ಪುಸ್ತಕದಲ್ಲಿ ನೋಂದಾಯಿತರಾದ ವ್ಯಕ್ತಿಗಳಿಗೆ ಇತರ ರಾಜ್ಯಗಳು ಪರಸ್ಪರ ಆಧಾರದ ಮೇಲೆ ನೋಂದಣಿಯನ್ನು ನೀಡಿದ ಮೇಲೆ ಅಂಥ ರಾಜ್ಯಗಳಲ್ಲಿ ನೋಂದಾಯಿತರಾದಂಥ ದಾದಿಯರು, ಸೂಲಗಿತ್ತಿಯರು, ಸಹಾಯಕ –ದಾದಿ ಸೂಲಗಿತ್ತಿಯರು ಮತ್ತು ಆರೋಗ್ಯ ಸಂದರ್ಶಕರನ್ನು ನೋಂದಣಿ ಪುಸ್ತಕದಲ್ಲಿ ಸೇರಿಸಲು ಇರುವ ಷರತ್ತುಗಳನ್ನು ವಿನಿಯಮಿಸುವುದು;

(ಎಲ್) 21ನೇ ಪ್ರಕರಣದ ಅಡಿಯಲ್ಲಿ ಕೊಡತಕ್ಕ ನೋಟೀಸಿನ ನಮೂನೆ ಮತ್ತು ರೀತಿಯನ್ನು ನಿರ್ಧರಿಸುವುದು;

(ಎಮ್) ಪರಿಷತ್ತು ದಾದಿಯರ ಸಂಸ್ಥೆಗಳನ್ನು ಪರಿಶೀಲಿಸುವ ರೀತಿಯನ್ನು ಮತ್ತು ಅಂಥ ಸಂಸ್ಥೆಗಳು ಒದಗಿಸಬೇಕಾದ ವಿವರ ಪತ್ರಗಳನ್ನು ಮತ್ತು ನಿರ್ವಹಿಸಬೇಕಾದ ದಾಖಲೆಗಳನ್ನು ನಿರ್ಧರಿಸುವುದು;

(ಎನ್) ಪರಿಷತ್ತು ಸಭೆಗಳನ್ನು ಕರೆಯುವುದನ್ನು ಮತ್ತು ಅದರ ವ್ಯವಹರಣೆಗಳನ್ನು ವಿನಿಯಮಿಸುವುದು;

(ಒ) ಈ ಅಧಿನಿಯಮದ ಅಡಿಯಲ್ಲಿ ವಿಧಿಸಲಾಗುವ ಎಲ್ಲಾ ಫೀಜುಗಳನ್ನು ಮತ್ತು ಪರಿಷತ್ತು ಸ್ವೀಕರಿಸುವ ಎಲ್ಲಾ ಹಣವನ್ನು ಲೆಕ್ಕ ಮಾಡುವ, ಪರಿಶೋಧಿಸುವ ಮತ್ತು ಈ ಆಧಿನಿಯಮದ ಉದ್ದೇಶಗಳಿಗಾಗಿ ವಿನಿಯೋಗಿಸುವ ರೀತಿಯನ್ನು ನಿರ್ಧರಿಸುವುದು ಮತ್ತು ಸಾಮಾನ್ಯವಾಗಿ ಪರಿಷತ್ತಿನ ವೆಚ್ಚವನ್ನು ವಿನಿಯಮಿಸುವುದು;

(ಪಿ) ಪರಿಷತ್ತಿನ ಅಥವಾ ಸಮಿತಿಗಳ ಸದಸ್ಯರಿಗೆ ಸಂದಾಯವಾಗಬೇಕಾದ ಪ್ರಯಾಣ ಮತ್ತು ಇತರ ವೆಚ್ಚಗಳನ್ನು ವಿನಿಯಮಿಸುವುದು;

(ಕ್ಯೂ) ಈ ಅಧಿನಿಯಮದ ಉದ್ದೇಶಗಳಿಗಾಗಿ ಪರಿಷತ್ತು ಉಪಬಂಧವನ್ನು ಮಾಡಬೇಕೆಂದು ಪರಿಗಣಿಸುವಂಥ ಯಾವುದೇ ವಿಷಯದ ಬಗ್ಗೆ ಸಾಮಾನ್ಯವಾಗಿ ಉಪಬಂಧ ಮಾಡುವುದು.

(2) ಪರಿಷತ್ತು ರಚಿಸಿದ ಯಾವುದೇ ಉಪ ವಿಧಿಯನ್ನು, ಮಾರ್ಪಾಟು ಅಥವಾ ತಿದ್ದುಪಡಿ ಮಾಡಿ ಅಥವಾ ಮಾಡದೆಯೇ ರಾಜ್ಯ ಸರ್ಕಾರವು ಅದನ್ನು ಅನುಮೋದಿಸುವವರೆಗೆ ಜಾರಿಗೊಳಿಸತಕ್ಕದ್ದಲ್ಲ.

(3) ಈ ಪ್ರಕರಣದ ಅಡಿಯಲ್ಲಿ ರಚಿಸಿದ ಎಲ್ಲಾ ಉಪ ವಿಧಿಗಳನ್ನು ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕದ್ದು.

(4) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಯಾವುದೇ ಉಪ ವಿಧಿಯನ್ನು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ರದ್ದುಪಡಿಸುವುದು ಅಥವಾ ತಿದ್ದುಪಾಟು ಮಾಡುವುದು ಕಾನೂನು ಸಮ್ಮತವಾಗಿರತಕ್ಕದ್ದು.

**31. ಅಧಿನಿಯಮ, ನಿಯಮಗಳು ಅಥವಾ ಉಪ ವಿಧಿಗಳ ಅಡಿಯಲ್ಲಿ ಸದ್ಭಾವನೆಯಿಂದ ಕಾರ್ಯ ನಿರ್ವಹಿಸುವ ವ್ಯಕ್ತಿಗಳಿಗೆ ರಕ್ಷಣೆ.** – ಈ ಅಧಿನಿಯಮ, ನಿಯಮಗಳು ಅಥವಾ ಉಪ ವಿಧಿಗಳ ಅಡಿಯಲ್ಲಿ ಯಾವುದೇ ಕಾರ್ಯವನ್ನು ಸದ್ಭಾವನೆಯಿಂದ ಮಾಡುವ ಅಥವಾ ಮಾಡಲು ಉದ್ದೇಶಿಸಿರುವ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**32. ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿ.** – ರಾಜ್ಯ ಸರ್ಕಾರಕ್ಕೆ ಅಥವಾ ಪರಿಷತ್ತಿಗೆ ಅಥವಾ ರಿಜಿಸ್ಟ್ರಾರನಿಗೆ ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಪ್ರದಾನ ಮಾಡಿದ ಯಾವುದೇ ಅಧಿಕಾರವನ್ನು ಚಲಾಯಿಸುವಾಗ ಮಾಡಲಾದ ಯಾವುದೇ ಕಾರ್ಯವನ್ನು ಯಾವುದೇ ಸಿವಿಲ್ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ.

**33. ನಿಯಂತ್ರಣ.** – (1) ಪರಿಷತ್ತು ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ತನಗೆ ಪ್ರಧಾನ ಮಾಡಿದ ಯಾವುವೇ ಅಧಿಕಾರಗಳನ್ನು ಚಲಾಯಿಸಲು ತಪ್ಪಿದೆಯೆಂದು ಅಥವಾ ಅವುಗಳನ್ನು ಮೀರಿದೆಯೆಂದು ಅಥವಾ ದುರುಪಯೋಗ ಪಡಿಸಿಕೊಂಡಿದೆಯೆಂದು ಅಥವಾ ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಅದಕ್ಕೆ ವಿಧಿಸಲಾದ ಯಾವುವೇ ಕರ್ತವ್ಯಗಳನ್ನು ನಿರ್ವಹಿಸಲು ತಪ್ಪಿದೆಯೆಂದು ರಾಜ್ಯ ಸರ್ಕಾರಕ್ಕೆ ಯಾವುದೇ ಸಮಯದಲ್ಲಿ ಕಂಡುಬಂದರೆ, ರಾಜ್ಯ ಸರ್ಕಾರವು, ಅಂಥ ತಪ್ಪುವಿಕೆ, ಮೀರುವಿಕೆ ಅಥವಾ ದುರುಪಯೋಗವು ತೀವ್ರ ಸ್ವರೂಪದ್ದೆಂದು ಪರಿಗಣಿಸಿದರೆ, ಪರಿಷತ್ತಿಗೆ ಆ ವಿವರಗಳನ್ನು ತಿಳಿಸತಕ್ಕದ್ದು ಮತ್ತು ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ನಿಗದಿಪಡಿಸಬಹುದಾದ ಸಮಯದೊಳಗೆ ಅಂಥ ತಪ್ಪುವಿಕೆಯನ್ನು, ಮೀರುವಿಕೆಯನ್ನು ಅಥವಾ ದುರುಪಯೋಗವನ್ನು ಪರಿಹರಿಸಲು ತಪ್ಪಿದಲ್ಲಿ, ರಾಜ್ಯ ಸರ್ಕಾರವು ಪರಿಷತ್ತನ್ನು ವಿಸರ್ಜಿಸಬಹುದು ಮತ್ತು ತಾನು ಸೂಕ್ತವೆಂದು ಭಾವಿಸುವಂಥ ವ್ಯಕ್ತಿಯು, ಅಂಥ ಅವಧಿಯವರೆಗೆ ಪರಿಷತ್ತಿನ ಎಲ್ಲಾ ಅಧಿಕಾರಗಳನ್ನು ಅಥವಾ ಯಾವುದೇ ಅಧಿಕಾರವನ್ನು ಚಲಾಯಿಸುವ ಮತ್ತು ಕರ್ತವ್ಯಗಳನ್ನು ನಿರ್ವಹಿಸುವ ವ್ಯವಸ್ಥೆ ಮಾಡತಕ್ಕದ್ದು ಮತ್ತು ಆ ತರುವಾಯ 3 ನೇ ಪ್ರಕರಣದ ಅಡಿಯಲ್ಲಿ ಹೊಸ ಪರಿಷತ್ತನ್ನು ರಚಿಸುವವರೆಗೆ ಪರಿಷತ್ತಿನ ನಿಧಿಗಳು ಮತ್ತು ಸ್ವತ್ತು ಈ ಅಧಿನಿಯಮದ ಉದ್ದೇಶಕ್ಕಾಗಿ ರಾಜ್ಯ ಸರ್ಕಾರದಲ್ಲಿ ನಿಹಿತವಾಗತಕ್ಕದ್ದು.

(2) ರಾಜ್ಯ ಸರ್ಕಾರವು, (1)ನೇ ಉಪಪ್ರಕರಣದ ಅಡಿಯಲ್ಲಿ ಪರಿಷತ್ತನ್ನು ವಿಸರ್ಜಿಸಿದಾಗ, 3ನೇ ಪ್ರಕರಣದ ಅಡಿಯಲ್ಲಿ ಒಂದು ಹೊಸ ಪರಿಷತ್ತನ್ನು ರಚಿಸಲು ಅನುಕೂಲವಾದಷ್ಟು ಬೇಗನೆ ಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ತದನಂತರ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಸ್ವತ್ತು ಮತ್ತು ನಿಧಿಗಳು ಹಾಗೆ ರಚಿತವಾದ ಪರಿಷತ್ತಿನಲ್ಲಿ ಪುನರ್ ನಿಹಿತವಾಗತಕ್ಕದ್ದು.

(3) ಈ ಅಧಿನಿಯಮ, ನಿಯಮಗಳು ಅಥವಾ ಉಪವಿಧಿಗಳಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಅಧಿಕಾರವನ್ನು ಚಲಾಯಿಸಲು ಅಥವಾ ಯಾವುದೇ ಪ್ರಕಾರ್ಯವನ್ನು ನಿರ್ವಹಿಸಲು ಅಧಿಕಾರ ಪಡೆದ ಪರಿಷತ್ತು ಅಥವಾ ಯಾವುದೇ ಇತರ ಪ್ರಾಧಿಕಾರವು ಕಾನೂನು ಮಾನ್ಯವಾಗಿ ರಚಿತವಾಗಿಲ್ಲವೆಂದು ಅಥವಾ ನೇಮಕಗೊಂಡಿಲ್ಲವೆಂದು ಯಾವುದೇ ಸಮಯದಲ್ಲಿ ರಾಜ್ಯ ಸರ್ಕಾರಕ್ಕೆ ಕಂಡುಬಂದರೆ, ರಾಜ್ಯ ಸರ್ಕಾರವು, ತಾನು ಸೂಕ್ತವೆಂದು ಭಾವಿಸುವಂಥ ವ್ಯಕ್ತಿಯ ಮೂಲಕ, ಅಂಥ ರೀತಿಯಲ್ಲಿ ಮತ್ತು ಆರು ತಿಂಗಳಿಗೆ ಮೀರದಂಥ ಅವಧಿಯವರೆಗೆ ಹಾಗೂ ಅಂಥ ಷರತ್ತುಗಳಿಗೆ ಒಳಪಟ್ಟು ಅಂಥ ಅಧಿಕಾರಗಳನ್ನು ಅಥವಾ ಪ್ರಕಾರ್ಯಗಳನ್ನು ಚಲಾಯಿಸುವ ಅಥವಾ ನೆರವೇರಿಸುವ ವ್ಯವಸ್ಥೆ ಮಾಡಬಹುದು.

**34. ನಿರಸನ.**– ಮದರಾಸು ದಾದಿಯರ ಮತ್ತು ಸೂಲಗಿತ್ತಿಯರ ಅಧಿನಿಯಮ, 1926 (1926ರ ಮದರಾಸು ಅಧಿನಿಯಮ, III) ಹೈದರಾಬಾದ್ ದಾದಿಯರ, ಸೂಲಗಿತ್ತಿಯರ ಮತ್ತು ಆರೋಗ್ಯ ಸಂದರ್ಶಕರ ನೋಂದಣಿ ಅಧಿನಿಯಮ, 1951 (1951ರ ಹೈದರಾಬಾದ್ ಅಧಿನಿಯಮ XIX ) ಮತ್ತು ಮುಂಬಯಿ ದಾದಿಯರು, ಸೂಲಗಿತ್ತಿಯರು ಮತ್ತು ಆರೋಗ್ಯ ಸಂದರ್ಶಕರ ಅಧಿನಿಯಮ, 1954 (1954ರ ಮುಂಬಯಿ ಅಧಿನಿಯಮ XIV ) – ಇವುಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ :

ಪರಂತು, [1][ಕರ್ನಾಟಕ][1] ಸಾಮಾನ್ಯ ಖಂಡಗಳ ಅಧಿನಿಯಮ, 1899ರ (1899ರ [1][ಕರ್ನಾಟಕ][1] ಅಧಿನಿಯಮ III) 6ನೇ ಪ್ರಕರಣವು, ಅಂಥ ನಿರಸನದ ಸಂಬಂಧದಲ್ಲಿ ಅನ್ವಯವಾಗತಕ್ಕದ್ದು ಮತ್ತು ಸದರಿ ಅಧಿನಿಯಮದ 8 ಮತ್ತು 24 ನೇ ಪ್ರಕರಣಗಳು, ಸದರಿ ಅಧಿನಿಯಮಿತಿಗಳನ್ನು ಈ ಅಧಿನಿಯಮದ ಮೂಲಕ ನಿರಸನಗೊಳಿಸಿ ಪುನರ್ ಅಧಿನಿಯಮಿತಿಗೊಳಿಸಿದಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

**1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.**

**35. ತೊಂದರೆಗಳ ನಿವಾರಣೆಗೆ ಅಧಿಕಾರ.**– ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದ ಅಧಿನಿಯಮಗಳ ಉಪಬಂಧಗಳಿಂದ ಈ ಅಧಿನಿಯಮದ ಉಪಬಂಧಗಳಿಗೆ ಆದ ಬದಲಾವಣೆಯ ಪರಿಣಾಮವಾಗಿ ಸದರಿ ಉಪಬಂಧಗಳನ್ನು ಜಾರಿಗೆ ತರುವಾಗ ಯಾವುದೇ ತೊಂದರೆಯು ಉದ್ಭವಿಸಿದರೆ, ರಾಜ್ಯ

ಸರ್ಕಾರವು ಅಧಿಸೂಚನೆಯ ಮೂಲಕ ಆ ತೊಂದರೆಯನ್ನು ನಿವಾರಿಸಲು ಅವಶ್ಯ ಅಥವಾ ವಿಹಿತವೆಂದು ಕಂಡುಬರುವಂಥ ಉಪಬಂಧಗಳನ್ನು ರಚಿಸಬಹುದು.

*****

**ಅಧಿಸೂಚನೆ**

**ಬೆಂಗಳೂರು, 30 ನೇ ಜುಲೈ 1968 [ಪಿಎಚ್‌ಎಸ್ 22 ಎಂಡಿಎ 62]**

**ಎಸ್.ಓ.1626.–** ಕರ್ನಾಟಕ ದಾದಿಯರು, ಸೂಲಗಿತ್ತಿಯರು ಮತ್ತು ಆರೋಗ್ಯ ಸಂದರ್ಶಕರ ಅಧಿನಿಯಮ, 1961ರ (1962ರ ಕರ್ನಾಟಕ ಅಧಿನಿಯಮ 4) 1ನೇ ಪ್ರಕರಣದ (3) ನೇ ಉಪ ಪ್ರಕರಣದ (ಎ) ಖಂಡದ (ii) ನೇ ಉಪ ಖಂಡದಿಂದ ಪ್ರದಾನ ಮಾಡಲಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, 1968ರ ಆಗಸ್ಟ್ 16 ನೇ ದಿನವನ್ನು ಸದರಿ ಅಧಿನಿಯಮದ II, III, V ಮತ್ತು VI ನೇ ಭಾಗಗಳು ಮತ್ತು VIIನೇ ಭಾಗದ ಉಳಿದ ಪ್ರಕರಣಗಳು ಇಡೀ ಕರ್ನಾಟಕ ರಾಜ್ಯದಲ್ಲಿ ಜಾರಿಗೆ ಬರತಕ್ಕ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,
**ಬಿ. ಎಸ್. ಶ್ರೀಕಂಠಯ್ಯ,**
ಸರ್ಕಾರದ ಕಾರ್ಯದರ್ಶಿ,
ಆರೋಗ್ಯ ಮತ್ತು ಪೌರಾಡಳಿತ ಇಲಾಖೆ.

The above translation of the Karnataka Nurses, Midwives and Health Visitors Act, 1961 (Karnataka Act No.4 of 1962) shall be authoritative text in the Kannada Language under section 5A of the Karnataka Official Language Act, 1963 (Karnataka Act 26 of 1963).

GOVERNOR OF KARNATAKA

ಪಿ.ಆರ್. 98

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಜಿ.ಕೆ. ಬೋರೇಗೌಡ**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.